

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

RNI REG No. : KARKAN/2016/75068

Volume : 07 | Issue : 159 | Thursday 27-02-2025 | E-mail : maruti.b.hosamani76@gmail.com | Page: 4 | Price : Rs. 1/-


## "ನಿತ್ಯಂ ಧ್ಯಾನಂತಿಯೋಗಿನಃ ಮಹಾ ಶಿವರಾತ್ರಿಪುಣ್ಯ ಫಲಂ ಲಭ್ಯಂ"




ಓಂಕಾರಂ ಶಿವಶಂಕರ ಮಂಗಳಕರ
ಶುಭಕರಂ ದೇವ ಮಹಾದೇವಂ
ಶ್ರೇಷ್ಠ ಭಾವದ ಅಧಿಪತಿಂ
ಜೀವಸಂಕುಲಗಳ ರಕ್ಷಿಪಂ
ವಿಶ್ವ ಮಾನವ ಕುಲದ
ಅರ್ದನಾರೀಶ್ವರಂ
ಮನಶಾಂತ ರೌದ್ರಂ ಗುಣ ನಾಶಕಂ
ಆದಿಯೋಗಿ ಆಧ್ಯಾತ್ಮಿಕ ವೈರಾಗ್ಯಂ
ವೀರಾಗಿ ದುಷ್ಟ ಸಂಹಾರಕಂ
ವಾಸುಕಿ ಮುಕ್ಕಣ್ಣ ಗಂಗಾಧರಂ
ಸ್ವಚ್ಛ ಹೃದಯ ಮಂದಿರದೊಳ ವಾಸಂ
ಶಿಷ್ಟ ರಕ್ಷಕಂ ತ್ರಿಶೂಲ ವೀರಭದ್ರ ಮಹೇಶ್ವರಂ
ಶುದ್ಧ ಮನದಿ ನೆನೆವಂಗೆ ಸದಾಶಿವಂ ನಟರಾಜ ಆತ್ಮದ ಪರಮಾತ್ಮಂ
ಶುದ್ಧಾತ್ಮಜರ ಈಶ್ವರ ಲಿಂಗರೂಪಂ
ಜಗತ್ ಮಧ್ಯ ಸೋಮಶೇಖರ ಬೆಳಕಂ
ಸರ್ವಭಕ್ತರ ಸಲಹು ನಂದೀಶಂ
ಮಹಾ ಶಿವ ಅನುಕೂಲಕರ ಶುಭಕರಂ ಶಂಭೋ ವರಪ್ರದಾಯಂ
ನಂಬಿದವರ ಶುಭಧಾಯಕಂ ನಿಷ್ಕಲ್ಮಶ ಭಕ್ತಿ ಶಕ್ತಿಯುಕ್ತಂ
ಸೃಷ್ಟಿಕರ್ತ ಶಿವಶಂಕರಂ ಶುದ್ಧ ಸಾತ್ವಿಕ ರಜಸ ತಮಸ್ಸು
ಶಂಬೋ ಶಂಕರ ಹರ ಹರ ಬಲಂ
ಬಾಳ್ವೇಗೆ ಮಹಾಬಲಂ ಮಹಾಕಾಲ ನೀಲಕಂಠಂ
ಸರ್ವೋಚ್ಛ ನಿರ್ಗುಣ ನಿರಾಕಾರಂ
ಜ್ಯೋತಿರ್ಲಿಂಗ ಪರಮಶಿವ ಅನಂತ ಸ್ವರೂಪಂ
ಜಗದ್ವಿಖ್ಯಾತ ಸೋಮನಾಥಾಯ ಶ್ರೀಶೈಲ ಮಲ್ಲಿಕಾರ್ಜುನಂ
ಮಹಾಕಾಳೇಶ್ವರ ಓಂಕಾರೇಶ್ವರ ಕೇದಾರನಾಥ ಭೀಮಾಶಂಕರಂ
ಕಾಶೀವಿಶ್ವನಾಥ ತ್ರ್ಯಂಬಕೇಶ್ವರ ವೈದ್ಯನಾಥ ರಾಮೇಶ್ವರಂ
ಗೃಷ್ಣೇಶ್ವರ ದರ್ಶನಂ ಜೀವನ ಪಾವನಂ ಓಂ ನಮಃ ಶಿವಾಯ
ಶುದ್ಧ ಮನಗಳಂ ಕ್ಷಣ ಕ್ಷಣನೆನವು
ಶಿವನೊಲಿಮೆ ನಿತ್ಯಂ ಧ್ಯಾನಂತಿಯೋಗಿನಃ
ಓಂಕಾರಾಯ ನಮೋನಮಃ ಮಹಾಶಿವರಾತ್ರಿಪುಣ್ಯ ಫಲಂ ಲಭ್ಯಂ

**–ಶ್ರೀದೇಶಂಸು**
**ಶ್ರೀಸುರೇಶ ಶಂಕ್ರೆಪ್ಪ ಅಂಗಡಿ**
**ಆರೋಗ್ಯ ನಿರೀಕ್ಷಣಾಧಿಕಾರಿ**
**ಬಾಗಲಕೋಟ.**

## ಸಂಗೋಗಿಯಲ್ಲಿ ಜನಪದ ಶಿವರಾತ್ರಿಯ – ಸಂಭ್ರಮ ಕಾರ್ಯಕ್ರಮ ಜರಗಿತು



**ಸಿಹಿ ಕಹಿ ಸುದ್ದಿ,**
**ಸಂಗೋಗಿ :** ಇಂಡಿ ತಾಲೂಕಿನ ಸಂಗೋಗಿ ಗ್ರಾಮದಲ್ಲಿ ಇಂದು ಜನಪದ ಶಿವರಾತ್ರಿ ಹಬ್ಬದ ನಿಮಿತ್ಯ ವಿವಿಧ ಭಜನಾ ಡೊಳ್ಳು ಕುಣಿತ, ಗೋಂದಳಿ ಪದಗಳು ಡೊಳ್ಳಿನ ಪದಗಳು ಲಾಗ್ಕುಣಿತಗಳು ಜರೂಗಿದವು ಕಾರ್ಯಕ್ರಮದ ಪಾವನ ಸಾನಿಧ್ಯ ಅಭಿನವ ಮುರುಗೇಂದ್ರ ಶಿವಾಚಾರ್ಯರು ವಹಿಸಿ ಜನಪದ ಸಾಹಿತ್ಯ ಎಲ್ಲಿಯವರೆಗೆ ಭಾರತದಲ್ಲಿ ಹಳ್ಳಿಗಳು ಇರುತ್ತದೋ ಅಲ್ಲಿಯವರೆಗೆ ಜನಪದ ಇದ್ದೇ ಇರುತ್ತದೆ ಅದು ಭಾರತೀಯರ ಆಚಾರ ವಿಚಾರ ಸಂಪ್ರದಾಯ ಸಂಸ್ಕೃತಿ ಬಿಂಬಿಸುವ ಅತ್ಯುತ್ತಮ ಕಾರ್ಯ ಕನ್ನಡ ಜಾನಪದ ಪರಿಷತ್ ಮಾಡುತ್ತದೆ ಜನರ ದಣಿವು ದುಃಖ ಹಂಚಿ ಕೊಳ್ಳಲು ಮತ್ತು ರೈತರು ದಣಿವು ಆಗದಂತೆ ಹಾಡು ಕುಣಿತ ನೃತ್ಯ ಮುಂತಾದ ಕಲೆಗಳೆ ಜನಪದರ ಜೀವಾಳ ಇದನ್ನು ಮುಂದಿನ ತಲೆ ಮಾರುಗಳಿಗೆ ಸಾಗಿಸುವ ಕೆಲಸ ಜನಪದ ಪರಿಷತ್ ಮಾಡುವುದು ಗುರುತರ ಜವಾಬ್ದಾರಿ ಎಂದು ಮಾತನಾಡಿದರು ಅಧ್ಯಕ್ಷತೆ ಪಂಡಿತ ಅವಜಿ ವಹಿಸಿ ಮಾತನಾಡಿದ ಜನಪದರ ಹಾಡುಗಳೆ ಜನಪದ ಜೀವಾಳ ಎಂದು ಹೇಳಿದರು ಕಲ್ಲಪ್ಪಗೌಡ ಪಾಟೀಲ ಉದ್ಘಾಟಿಸಿದರು ಆನಂದ ಕೆಂಬಾವಿ ಹಣಮಂತ ಬಿಸನಾಳ ಶ್ರೀಮಂತ ಬಿಸನಾಳ ಇದ್ದರೂ ಬಸವೇಶ್ವರ ಭಜನಾ ಸಂಘ ಅಮೋಘಸಿದ್ದ ಹೊಳ್ಳಿನಪದ ಸಂಗಮೇಶ್ವರ ಭಜನಾ ಸಿದ್ಧಾರೂಡ ಭಜನಾ ಸಂಘ ಮುಂತಾದ ಸಂಘದವರಿಂದ ಭಕ್ತಿ ಸಂಗೀತ ಕಾರ್ಯಕ್ರಮಗಳು ಜರಾಗಿದವು ಜಟ್ಟೆಪ್ಪ ಮಾದರ ನಿರೂಪಿಸಿ ಸ್ವಾಗತಿಸಿದರು ಸುಭಾಶ್ಚಂದ್ರ ನಾವಿ ವಂದಿಸಿದರು.

**ಜಿಲ್ಲಾ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:**
**ಶಿವಾನಂದ.ಬಿ.ಹರಿಜನ.**
**ಇಂಡಿ**

## ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕ್ರಮಕ್ಕೆ – ಚಾಲನೆ ಕೋರಿದ ಶಫಿ ಚಾವೂಷ್



**ಸಿಹಿ ಕಹಿ ಸುದ್ದಿ,**
**ಮಾನ್ವಿ :** ಮಾನ್ವಿಯಲ್ಲಿ ಫೆಬ್ರವರಿ 27 ರಂದು ನಡೆಯುವ 10 ನೇ. ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ಸಮಿತಿಗೆ ಪತ್ರಕರ್ತ ಶಫಿ ಚಾವೂಷ್ ಚಾಲನೆ ನೀಡಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಕಂದಾಯ ಕಚೇರಿಯಲ್ಲಿ ಪ್ರಚಾರದ ವಾಹನಕ್ಕೆ ಚಾಲನೆ ನೀಡಿ, ಮಾನ್ವಿ ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಬೇಕು ಎಂದರು.

ಮಾನ್ವಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ರವಿಕುಮಾರ್ ಪಾಟೀಲ್ ವಕೀಲ ಮಾತನಾಡಿ, 10 ನೇ. ಕನ್ನಡ ಸಾಹಿತ್ಯ ಸಮ್ಮೇಳನ ವಾಸವಿ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಮಾನ್ವಿ ತಾಲೂಕಿನ ಪ್ರತಿಯೊಬ್ಬರು ಭಾಗವಹಿಸಿ ಸಮ್ಮೇಳನ ನೋಡಲು ಬನ್ನಿ ಎಂದು ಕರೆ ನೀಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಹುಸೇನ್.ಭಾಷಾ.ನಕ್ಕುಂದಿ.**
**ಮಾನ್ವಿ**

## ಐಕ್ಯೂಎಸಿ ಘಟಕದಿಂದ ಉನ್ನತ ಶಿಕ್ಷಣದ ಅಭಿವೃದ್ಧಿ ಸಾಧ್ಯ: ಮಹಾದೇವ ಮುರಗಿ



**ಬಾಗಲಕೋಟೆ :** ಆಧುನಿಕ ಕಾಲಘಟ್ಟದಲ್ಲಿ ಉನ್ನತಶಿಕ್ಷಣಓದುತ್ತಿರುವಯುವಸಮೂಹ ಹಾಗೂಬೋಧಕರುತಮ್ಮಅಧ್ಯಯನಗಳಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಬೇಕು. ಕಾಲೇಜಿಗಳಲ್ಲಿರುವ ಐಕ್ಯೂಎಸಿ ಘಟಕದ ಮೂಲಕ ಉನ್ನತ ಶಿಕ್ಷಣ ಅಭಿವೃದ್ಧಿಯ ಗುರಿ ಮುಟ್ಟಲು ಸಾಧ್ಯವಿದೆ ಎಂದು ತೋಟಗಾರಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಸಚಿವರಾದ ಮಹಾದೇವ ಮುರಗಿ ಅವರು ಹೇಳಿದರು.

ಅವರು ಶುಕ್ರವಾರ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ (ಐಕ್ಯೂಎಸಿ) ಆಂತರಿಕ ಗುಣಮಟ್ಟ ಭರವಸೆ ಕೋಶದ ಅಡಿಯಲ್ಲಿ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟನೆ ಮಾಡಿ, ಮಾತನಾಡಿದರು.

ಮುಂದುವರಿದ ಮಾತನಾಡಿ ಅವರು ಉನ್ನತ ಶಿಕ್ಷಣದಲ್ಲಿ ಬೋಧಕರು ತಮ್ಮ ಬೋಧನೆಯ ಜೊತೆಜೊತೆಗೆ ವಿದ್ಯಾರ್ಥಿಗಳಲ್ಲಿ ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ವಿಚಾರಗಳನ್ನು ಬೆಳೆಸಬೇಕು. ಕಾಲೇಜುಗಳಲ್ಲಿ ಪಾರದರ್ಶಕವಾದ ಆಡಳಿತವನ್ನು ನೀಡಿ, ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಕಾಲೇಜಿನ ಅಭಿವೃದ್ಧಿಯಲ್ಲಿ ಬೋಧಕರಷ್ಟೆ ಬೋಧಕೇತರ ಸಿಬ್ಬಂದಿಯವರ ಪ್ರರಿಶ್ರಮ ಮುಖ್ಯವಾಗಿರುತ್ತದೆ ಎಂದರು.

ಪ್ರಾಂಶುಪಾಲರಾದ ಡಾ.ಅರುಣಕುಮಾರ ಗಾಳಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜಿನ ಅಭಿವೃದ್ಧಿಗೆ ಬೋಧಕ, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಹಾಗೂ ಹಳೆ ವಿದ್ಯಾರ್ಥಿಗಳು ಪಂಚೇಂದ್ರಿಗಳಿದ್ದಂತೆ. ಇವರೆಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ಪಾಲಿಸಿದರೆ

ಕಾಲೇಜು ಹಾಗೂ ಉನ್ನತ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಐಕ್ಯೂಎಸಿ ಸಂಚಾಲಕ ಡಾ.ಪ್ರಭುದೇವ ಮಂಡಿ ಅವರು ಉನ್ನತ ಶಿಕ್ಷಣದಲ್ಲಿ ಐಕ್ಯೂಎಸಿ ಪಾತ್ರ ಎಂಬ ವಿಷಯ ಕುರಿತು ಉಪನ್ಯಾಸ ನೀಡಿ, ಪದವಿ ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳ ಪ್ರಗತಿಗೆ ಪೂರಕವಾದ ಕೌಶಲ್ಯಗಳನ್ನು ಬಳಸಿಕೊಂಡು ಬೋಧಕರು ತಮ್ಮ ಬೋಧನೆಯಲ್ಲಿ ಹೊಸಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಂಡು ಪರಿಣಾಮಕಾರಿ ಬೋಧನೆ ಮಾಡಿದರೆ ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕನ್ನಡ ವಿಭಾಗ ಸಹ ಪ್ರಾಧ್ಯಾಪಕರಾದ ಡಾ. ಜಿ.ಜಿ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿ, ಯುಜಿಸಿ ರಚಿಸಿರುವ ನೂತನ ಶೈಕ್ಷಣಿಕ ನಿಯಮಾವಳಿಯಲ್ಲಿ ನ್ಯಾಕ್ ಮತ್ತು ಐಕ್ಯೂಎಸಿ ಘಟಕಗಳ ಪಾತ್ರಮಹತ್ವದ್ದಾಗಿವೆ. ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶದಿಂದ ವಿದ್ಯಾರ್ಥಿಯ ಕಲಿಕೆ, ಅಭಿವೃದ್ಧಿ ಇವುಗಳ ಸಮನ್ವಯತೆ ಮೂಲಕ ಉನ್ನತ ಶಿಕ್ಷಣವನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ ಎಂದರು.

ವಿಚಾರ ಸಂಕಿರಣದಲ್ಲಿ ವಿವಿಧ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ಪ್ರೊ.ಪರಸಪ್ಪ ತಳವಾರ ಪ್ರಾರ್ಥಿಸಿದರು, ಐಕ್ಯೂಎಸಿ ಸಹ ಸಂಚಾಲಕರಾದ ಡಾ.ಮೂಬಿನ್ ಬೆಳಗಾಮ್ ಸ್ವಾಗತಿಸಿದರು, ಡಾ.ಸುಮಂಗಲಾ ಮೇಟಿ ವಂದಿಸಿದರು, ಡಾ.ಚಂದ್ರಶೇಖರ ಕಾಳನ್ನವರ ನಿರೂಪಿಸಿದರು.

## ಫೆ. 28 ರಂದು 16 ನೇ ಶರಣ ಸಂಸ್ಕೃತಿ ಉತ್ಸವ



**ಬನಹಟ್ಟಿ :** ಪ್ರತಿ ವರ್ಷದಂತೆ ಈ ವರ್ಷವೂ ಶ್ರೀಗುರು ಬಸವ ಮನೆಯಲ್ಲಿ ಮಹಾಮನೆ ಸೇವಾ ಸಮಿತಿ ವತಿಯಿಂದ ಫೆಬ್ರುವರಿ 28 ರಂದು ವಚನ ಗ್ರಂಥ ರಥೋತ್ಸವ, ಡಾ. ಫ. ಗು. ಹಳಕಟ್ಟಿ ಶರಣರ ಸ್ಮರಣೋತ್ಸವ ಹಾಗೂ ಹದಿನಾರನೇ ಶರಣ ಸಂಸ್ಕೃತಿ ಉತ್ಸವ ನಡೆಯಲಿದೆ ಎಂದು ಸೇವಾ ಸಮಿತಿಯ ಉಪಾಧ್ಯಕ್ಷ ಮಹಾಂತ ದೇವರು ಹೇಳಿದರು.

ಅವರು ಇಲ್ಲಿಯ ಕೆ.ಎಚ್.ಡಿ.ಸಿ. ಕಾಲೋನಿಯಲ್ಲಿರುವ ಗುರುಬಸವ ವಚನ ಮಂಟಪದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಅಂದು ಮುಂಜಾನೆ ಆರು ಗಂಟೆಗೆ ಇಷ್ಟಲಿಂಗ ಪೂಜೆ ಸಹಜ ಶಿವಯೋಗ, ಹತ್ತು ಗಂಟೆಗೆ ಷಟ್ಸ್ಥಳ ಧ್ವಜಾರೋಹಣ ನಂತರ ವಚನ ದರ್ಶನ ಪ್ರವಚನ ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ 7–30 ಕ್ಕೆ ವಚನ ರಥೋತ್ಸವನಡೆಯಲಿದೆ.ಈಎಲ್ಲಕಾರ್ಯಕ್ರಮಗಳಲ್ಲಿ ಎಲ್ಲರೂ ಭಾಗವಹಿಸಿ ತನು,ಮನ ಧನದಿಂದ ಸಹಾಯ ಸಹಕಾರ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಇಲಕಲ್ಲದ ಗುರುಮಹಾಂತ ಶ್ರೀಗಳು, ರಬಕವಿಯ ಬೃಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳ ಸಾನಿಧ್ಯದಲ್ಲಿ ಹಾವೇರಿ ನರಸಾಪುರದ ಅಂಬಿಗರ ಚೌಡಯ್ಯ ಗುರುಪೀಠದ ಜಗದ್ಗುರು ಶಾಂತಭೀಷ್ಮ ಚೌಡಯ್ಯ ಶ್ರೀಗಳ ಅಧ್ಯಕ್ಷತೆಯಲ್ಲಿ ಹಾರೂಗೇರಿಯ ಐ. ಆರ್. ಮಠಪತಿ ಅವರು ಅನುಭಾವ ನೀಡಲಿದ್ದು, ಯಲ್ಲಪ್ಪ ಮಹಾರಾಜರು, ಶಾಸಕ ಸಿದ್ದು ಸವದಿ, ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಡಾಕ್ಟರ್ ಉಮಾಶ್ರೀ, ಕಾಂಗ್ರೆಸ್ ಧುರೀಣ ಸಿದ್ದು ಕೊಣ್ಣೂರ, ಅಶೋಕ ವಾಲಿಕರ, ಪ್ರಭು ಸುಣಗಾರ, ದೇವಲ ದೇಸಾಯಿ, ಪ್ರಕಾಶ ದೇಸಾಯಿ ಆಗಮಿಸಲಿದ್ದಾರೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ನಗರದ ಗಣ್ಯರಾದ ಶಂಕರ ಜಾಲಿಗಿಡದ ವಹಿಸಿದ್ದರು.

ಬಸವರಾಜ ಚನಾಳ, ರಾಜಶೇಖರ ಮಟ್ಟಿಕಲ್ಲಿ, ಮಹಾದೇವಪ್ಪ ಹುನ್ನೂರ, ಶಂಕರ ಹೋಳಗಿ, ಭೂಮನಿಂಗ ಜೇವೂರ, ಕಾಡಪ್ಪ ಮುನ್ನೋಳ್ಳಿ, ಪ್ರಕಾಶ ಬರಗಲ್ಲ, ಪಾಂಡುರಂಗ ಚನಾಳ, ರಂಗಾ ಗೋಧಕರ, ಅಶೋಕ ಜೋರಿ, ಮಹೇಶ ಬಂಡಿಗಣಿ, ಶಿವಾನಂದ ಬರಗಲ್ಲ, ರಾಜು ಹೂಗಾರ, ಬಸವಂತಪ್ಪ ಬಿಜ್ಜರಗಿ, ಇಮಾಮಸಾಬ ಮುಲ್ಲಾ, ಪ್ರಕಾಶ ಭಸ್ಮೆ, ಶ್ರೀಶೈಲ ಮುಗಳೊಳ್ಳಿ, ಮಲ್ಲಪ್ಪ ಚಿಪ್ಪಾಡಿ, ಸಚಿನ ತೆಲಸಂಗ, ಹುಚ್ಚಪ್ಪ ಹೋಳಗಿ, ರಮೇಶ ಸುಲ್ತಾನಪೂರ, ವಿಠ್ಠಲ ಬಸಪ್ಪಗೋಳ, ಲಕ್ಷ್ಮಿ ಅಂಗಡಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ವಸತಿ ಶಾಲೆಗಳಿಗೆ ಆಯ್ಕೆಯಾಗಿ ಸಾಧನೆಗೈದ ಮಕ್ಕಳಿಗೆ ಸನ್ಮಾನ



**ಲೋಕಾಪುರ :** ಪಟ್ಟಣದ ಶ್ರೀ ರಾಮಕೃಷ್ಣ ಪರಮಹಂಸ ಶಿಕ್ಷಣ ಸಂಸ್ಥೆ ಸಿರಿಗನ್ನಡ ಪೂರ್ವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಶಾರದಾ ಮಾತಾ ಆಂಗ್ಲ ಮಾಧ್ಯಮ ಶಾಲೆ, ಶ್ರೀ ಸ್ವಾಮಿ ವಿವೇಕಾನಂದ ನವೋದಯ ತರಬೇತಿ ಕೇಂದ್ರಸಹಯೋಗದಲ್ಲಿಶಾಲೆಆವರಣದಲ್ಲಿ “ವಿವೇಕೋತ್ಸವ–2025” ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾಗಿ ಸಾಧನೆಗೈದ ಮಕ್ಕಳಿಗೆ ಶಾಲೆ ವತಿಯಿಂದ ಸನ್ಮಾನಿಸಲಾಯಿತು.

ರಾಜ್ಯ ಸಹಕಾರ ಕುರಿ ಮಹಾಮಂಡಳ ಉಪಾಧ್ಯಕ್ಷ ಕಾಶಿನಾಥ ಹುಡೇದ ಅಧ್ಯಕ್ಷತೆ ವಹಿಸಿದ್ದರು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವಿವೇಕಾನಂದ ಎಂ, ಧಾರವಾಡದ ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಬಿ.ಎಚ್. ಗೋನಾಳ, ಜಿಲ್ಲಾ ವರದಿಗಾರರಾದ ಶ್ರೀಶೈಲ ಬಿರಾದಾರ, ಜಗದೀಶ ಗಾಣಿಗೇರ ಹಾಗೂ ಸಂತೋಷ ದೇಶಪಾಂಡೆ, ಕಸಾಪ ಗೌರವ ಕಾರ್ಯದರ್ಶಿ ಪ್ರವೀಣ ಗಂಗಣ್ಣವರ, ಚಿದಂಬರೇಶ್ವರ ಬ್ಯಾಂಕ್ ಅಧ್ಯಕ್ಷ ಸಂತೋಷ ದೇಶಪಾಂಡೆ, ರಾಮಕೃಷ್ಣ ಪರಮಹಂಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಿದ್ದು ಹೊಳಬಸಪ್ಪ ಹೂಗಾರ, ಸಂಸ್ಥೆ ಉಪಾಧ್ಯಕ್ಷ ಹೊಳಬಸಪ್ಪ ಹೂಗಾರ, ಶಕುಂತಲಾ ಹೆಬ್ಬಳ್ಳಿಮಠ, ಶಿವಪ್ಪ ಹೂಗಾರ, ಶಾಲೆ ಕೋ ಆರ್ಡಿನೇಟರ್ ಮಂಜುಳಾ ದಂಡಗಿ, ಶಿಕ್ಷಕರಾದ ರವಿಕುಮಾರ ಸನದಿ, ಕೃಷ್ಣಾ ದಳವಾಯಿ, ಪ್ರವಿತ್ರಾ ಮುತ್ತನ್ನವರ, ಕೆ.ಪಿ. ಯಾದವಾಡ, ಶಿಕ್ಷಕವೃಂದ, ಪಾಲಕರು, ಮಕ್ಕಳು ಇದ್ದರು.

## ಬಿಲ್ ಪಾವತಿಗೆ ಕ್ರಮ, ಗುತ್ತಿಗೆದಾರನ ಧರಣಿ ಅಂತ್ಯ

**ತೇರದಾಳ :** ಪುರಸಭೆಯ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದರೂ ಕೂಡ, ಪುರಸಭೆ ಜೆ.ಇ. ಬಿಲ್ ಪಾವತಿಸುತ್ತಿಲ್ಲ ಎಂದು ಆರೋಪಿಸಿ ಪುರಸಭೆ ಮುಂದೆ ಧರಣಿ ಕೈಗೊಂಡಿದ್ದ ಪ್ರಥಮದರ್ಜೆಗುತ್ತಿಗೆದಾರಮುರಗೇಶಮಿರ್ಜಿಅವರಿಗೆ ಬಿಲ್ ಪಾವತಿಸುವ ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ಹಾಗೂ ಕೆಲ ಮುಖಂಡರ ಮಧ್ಯಸ್ಥಿಕೆಯಿಂದ ಅವರ ಮನವೊಲಿಸಿದ್ದರಿಂದ ಧರಣಿ ಸತ್ಯಾಗ್ರಹ ಕೈ ಬಿಟ್ಟರು.

ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಮುರಗೇಶ ಮಿರ್ಜಿ ಅವರ ಬಿಲ್ಗಳನ್ನು ಮಾಡುವ ಕ್ರಮ ಕೈಗೊಳ್ಳಲಾಗಿದೆ.

ಕೆಲ ಕಾಮಗಾರಿಗಳ ವಿಷಯದಲ್ಲಿ ಮಿರ್ಜಿ ಅವರು ಕಾಮಗಾರಿಗೆ ಇಟ್ಟ ಅಂದಾಜು ಮೊತ್ತದ ಪೂರ್ಣ ಹಣವನ್ನು ಪಾವತಿಸುವಂತೆ ಹಠ ಹಿಡಿದಿದ್ದಾರೆ. ಅವರು ಹೇಳಿದಂತೆ ಮಾಡಲು ಬರುವುದಿಲ್ಲ. ಎಷ್ಟು ಕೆಲಸ ಆಗಿದೆಯೋ ಅಷ್ಟನ್ನು ಮಾತ್ರ ಬಿಲ್ ಪಾವತಿಸಲು ಸಾಧ್ಯ.ಜೆ.ಇ.ಅವರುಅಂತಿಮಗೊಳಿಸಿದಬಿಲ್ಲುಮಿರ್ಜಿ ಅವರಿಗೆ ಸರಿ ಅನಿಸದಿದ್ದರೆ ಮೇಲಾಧಿಕಾರಿಗಳಿಂದ ತನಿಖೆ ನಡೆಸಲಾಗುವುದು.

ಬೇರೆಯವರಿಗೊಂದು ನನಗೊಂದು ರೀತಿಯ ಪರಾಮರ್ಶೆ ಮಾಡುತ್ತಾರೆ ಎಂಬ ಮಿರ್ಜಿ ಅವರ ಆರೋಪ ನಿರಾಧಾರವಾಗಿದೆ. ಅವರಿಗೆ ಅಂತಹ ಸಂಶಯ ಇದ್ದರೆ ಯಾರ ಮತ್ತು ಯಾವ ಕಾಮಗಾರಿಗೆ ಆ ತರಹ ಆಗಿದೆ ಎಂಬುದರ ಬಗ್ಗೆ ಅವರು ಸಾಕ್ಷ್ಯಾಧಾರ ಸಹಿತ ದೂರು ನೀಡಲಿ. ಅದರ ಬಗ್ಗೆ ತನಿಖೆ ನಡೆಸಲಾಗುವುದು. ಸುಮ್ಮನೆ ಪುರಸಭೆ ಅಧಿಕಾರಿಗಳ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎಂದು ಸ್ಪಷ್ಟಪಡಿಸಿದರು. ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ ಈ ಸಂದರ್ಭದಲ್ಲಿ ಹಾಜರಿದ್ದರು.

# ರನ್ನ ರಥಯಾತ್ರೆ ಬಗ್ಗೆ ಮಾಹಿತಿ ನೀಡದ ಅಧಿಕಾರಿಗಳು
# ಮೂಗಬಸವನಂತೆ ನಡೆದ ರನ್ನ ವೈಭವ ರಥಯಾತ್ರೆ!



**ತೇರದಾಳ :** ರನ್ನ ವೈಭವ ನಿಮಿತ್ಯ ಜಿಲ್ಲಾದ್ಯಂತ ಸಂಚರಿಸುತ್ತಿರುವ ರನ್ನ ವೈಭವ ರಥಯಾತ್ರೆ ಶುಕ್ರವಾರ ಸಂಜೆ ಪಟ್ಟಣಕ್ಕೆ ಆಗಮಿಸಿತು. ಪೊಲೀಸ್ ಠಾಣೆ ಹತ್ತಿರ ತಹಶೀಲ್ದಾರ್ ವಿಜಯಕುಮಾರ ಕಡಕೋಳ, ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಉಪಾಧ್ಯಕ್ಷೆ ನಸ್ರೀನ್ಬಾನು ನಗಾರ್ಜಿ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಮಾಲಾರ್ಪಣೆಗೈಯುವ ಮೂಲಕ ಸ್ವಾಗತ ಮಾಡಿಕೊಂಡರು. ಆದರೆ ನೋವಿನ ಸಂಗತಿ ಎಂದರೆ ರಥಯಾತ್ರೆಗೆ ಬಳಸಲಾಗಿದ್ದ ವಾಹನದಲ್ಲಿ ಯಾವುದೇ ಧ್ವನಿ ವರ್ಧಕ ಇರಲಿಲ್ಲ. ಘೋಷಣೆಗಳು ಕೇಳಲಿಲ್ಲ. ಹಳ್ಳಿಗಳ ಕಡೆಗೆ ಕಾಟಾಚಾರಕ್ಕೆ ಊರಿನ ಹದ್ದು ( ಗಡಿ) ದಾಟಿಸುವ ದ್ಯಾಮವ್ವನ ಪಲ್ಲಕ್ಕಿಯ ತರಹ ಮೂಗಬಸವನಂತೆ ಸಂಚರಿಸಿ ತೇರದಾಳ ಮಾರ್ಗವಾಗಿ ಗೋಲಭಾಂವಿ ಗ್ರಾಮಕ್ಕೆ ತಲುಪಿತು. ಸ್ಥಳೀಯ ಮಟ್ಟದಲ್ಲಿಯೂ ಯಾವುದೇ ವಾದ್ಯಮೇಳವನ್ನು ಕೂಡ ಹೇಳದಿರುವುದು ಸಾರ್ವಜನಿಕರಲ್ಲಿ ಆಕ್ರೋಶಕ್ಕೆ ಕಾರಣವಾಯಿತು. ಮದ್ಯಾಹ್ನ 2–30 ಕ್ಕೆ ನಿಗದಿಗೊಂಡಿದ್ದ ರಥಯಾತ್ರೆ ಸಂಜೆ ಐದು ಗಂಟೆಗೆ ಆಗಮಿಸಿತು. ಇದರಿಂದ ಬಿಸಿಲಿನಲ್ಲಿ ಶಾಲಾ ಮಕ್ಕಳು, ಅಂಗನವಾಡಿ ಕಾರ್ಯಕರ್ತೆಯರು ರಥದ ಆಗಮನಕ್ಕಾಗಿ ಕಾದು, ಕಾದು ಸುಸ್ತಾದರು. ಇನ್ನು ರಥ ಆಗಮಿಸುವ ಕುರಿತು ಸಾಹಿತಿಗಳಿಗೆ, ಜನಪ್ರತಿನಿಧಿಗಳಿಗೆ, ಸಂಘಟನೆಗಳಿಗೆ, ಸಾರ್ವಜನಿಕರಿಗೆ, ಪತ್ರಕರ್ತರಿಗೆ ಮಾಹಿತಿಯೇ ಇರಲಿಲ್ಲ. ರನ್ನ ವೈಭವ ಕಾರ್ಯಕ್ರಮಕ್ಕೆ ನಮ್ಮೂರಲ್ಲಿ ಚಂದಾ ತಗೆದುಕೊಂಡು ಹೋದರು. ಆದರೆ ರಥ ಬರುವ ಕುರಿತು ಮಾಹಿತಿ ಕೂಡ ನೀಡಿಲ್ಲ. ಪಟ್ಟಣದಲ್ಲಿ ಶೃಂಗಾರಗೊಳಿಸಿಲ್ಲ ಎಂದು ಹಲವರು ಗೊಣಗಿದರು. ತೇರದಾಳಕ್ಕೆ ಆಗಮಿಸಿದ ರನ್ನ ವೈಭವ ರಥಯಾತ್ರೆ ಕೇವಲ ಮೊಬೈಲ್ ಸೆಲ್ಫೀಗೆ ಸಿಮೀತಗೊಂಡಿತ್ತು.

# ಪುರುಷರಿಗೆ ಮೀಸಲಿಟ್ಟ ಆಸನ ಬಿಟ್ಟುಕೊಡಿ

**ಮೈಸೂರು :** ಈ ಹಿಂದೆ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಸೀಟು ಬಿಟ್ಟುಕೊಡುವಂತೆ ಆದೇಶ ಹೊರ ಬಿದ್ದಿತ್ತು. ಆದರೆ, ಈಗ ಸರ್ಕಾರ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಟ್ಟ ನಂತರ ಪರಿಸ್ಥಿತಿ ಬದಲಾಗಿದೆ. ಪುರುಷ ಪ್ರಯಾಣಿಕರಿಗೆ ಸೀಟುಗಳನ್ನು ಬಿಟ್ಟುಕೊಡುವಂತೆ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದಿಂದ ಆದೇಶ ಹೊರ ಬಿದ್ದಿದೆ.



ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶವಿದೆ. ಹೀಗಾಗಿ ಮಹಿಳೆಯರು ಪುರುಷರಿಗೆ ಮೀಸಲಿಟ್ಟ ಆಸನಗಳಲ್ಲಿಯೂ ಕುಳಿತು ಕೊಳ್ಳುತ್ತಿದ್ದಾರೆ.

ಆದರೆ, ಹಣ ಕೊಟ್ಟು ಪ್ರಯಾಣ ಮಾಡುವ ಪುರುಷರಿಗೆ ಆಸನಗಳೇ ಸಿಗುತ್ತಿಲ್ಲ. ಈ ಬಗ್ಗೆ ಸಾರ್ವಜನಿಕವಾಗಿ ಆರೋಪಗಳು ಕೇಳಿ ಬಂದಿವೆ.

ಈ ಹಿನ್ನೆಲೆಯಲ್ಲಿ ಪುರುಷರಿಗೆ ಮೀಸಲಿಟ್ಟಿರುವ ಸೀಟುಗಳನ್ನು ಅವರಿಗೇ ಬಿಟ್ಟುಕೊಡಬೇಕು. ಈ ಬಗ್ಗೆ ಗಮನ ಹರಿಸುವಂತೆ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಚಾಲಕರು ಮತ್ತು ಸಿಬ್ಬಂದಿಗೆ ಆದೇಶ ಹೊರಡಿಸಿದ್ದಾರೆ.

**ಆದೇಶದಲ್ಲೇನಿದೆ?**

ಪುರುಷರಿಗೆ ಮೀಸಲಾಗಿರುವ ಆಸನಗಳಲ್ಲಿ ಮಹಿಳೆಯರು ಕುಳಿತು ಪ್ರಯಾಣಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ಆದೇಶ ಹೊರ ಬಿದ್ದಿದೆ.

ಮಹಿಳಾ ಪ್ರಯಾಣಿಕರು ಪುರುಷರಿಗೆ ಮೀಸಲಿಟ್ಟಿರುವ ಆಸನಗಳಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ನಮಗೆ ಸೀಟುಗಳು ಸಿಗುತ್ತಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿಷ್ಣುವರ್ಧನ ಎಂಬುವರು ಕೇಂದ್ರ ಕಚೇರಿಗೆ ದೂರು ನೀಡಿದ್ದರು.

# ಶ್ರೀ ಮಹಾಕೂಟೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಸಂತೆ ಯಶಸ್ವಿ

**ಬಾದಾಮಿ :** ರುಚಿಯಾದ ಮಂಡಕ್ಕಿ ಕೇವಲ 5 ರೂ ತರಕಾರಿ, ಹಣ್ಣು ಬನಬೇಕಾ ತಗೊ ಬರೀ ಕಡಿಮೆ ರೇಟು ಬನ್ನಿ ಬನ್ನಿ ಎಂದು ಚಿಕ್ಕ ಮಕಳು ನಗರದ ಶ್ರೀ ಮಹಾಕೂಟೇಶ್ವರ ಹಿರಿಯ ಶಾಲೆಯ ಆವರಣದಲ್ಲಿ ಗುರುವಾರ ಮಕ್ಕಳ ಸಂತೆಯಲ್ಲಿ ಕಂಡು ಬಂದ ನುನಮನೋಹರ ದೃಶ್ಯಕಾವ್ಯ



ಶಾಲಾ ಮಕ್ಕಳೇ ಸ್ವತಃ ಕಾಯಿಪಲ್ಲೆ, ಹಣ್ಣು, ಮಂಡಕ್ಕಿ ಸೇರಿದಂತೆ ವಿವಿಧ ರೀತಿಯ ವಸ್ತುಗಳನ್ನು ತಂದು ಶ್ರೀ ಮಹಾಕೂಟೇಶ್ವರ ಶಾಲೆಯ ಆವರಣದಲ್ಲಿ ಪಾಲಕರಿಗೆ, ಸಾರ್ವಜನಿಕರಿಗೆ ಮಾರಾಟ ಮಾಡಿ ಗಮನ ಸೆಳೆದರು. ಚಿಕ್ಕಮಕ್ಕಳಲ್ಲಿ ವ್ಯವಹಾರಿಕ ಜ್ಞಾನ ಬೆಳೆಯಲಿ ಮತ್ತು ಗಣಿತದ ಬಗ್ಗೆ ಅರಿವು ಮೂಡಲಿ ಎಂಬ ಉದ್ದೇಶದಿಂದ ಶಾಲಾ ಶಿಕ್ಷಣ ಇಲಾಖೆಯ ಆದೇಶದಂತೆ ಮಕ್ಕಳ ಸಂತೆ ನಡೆಯಿತು.

ಶಾಲೆಯ ಪಾಲಕರು ತಮಗೆ ಬೇಕಾದ ದಿನನಿತ್ಯಕ್ಕೆ ಬೇಕಾದ ಈರುಳ್ಳಿ, ಮೆಣಸಿನಕಾಯಿ, ಟೊಮೊಟೊ, ಹೀರಿಕಾಯಿ ಇದಲ್ಲದೇ ಜನರ ತಿನಸಿಗಳಾದ ಪಾಣೆಮರಿ ವಡಾ ಪಾವ್, ಸಮೋಸಾ ಸಹಿತ ವ್ಯಾಪಾರ ಮಾಡಿದರು. ಬಹಳಷ್ಟು ಜನರು ಖರೀದಿ ಮಾಡಿದರು.

ಕಾರ್ಯಕ್ರಮದ ಉದ್ಘಾಟನೆ ಮಾಡಿದ ಕಿತ್ತೂರ ಚನ್ನಮ್ಮ ಹಿರಿಯ ಪ್ರಾಥಮಿಕ ಶಾಲೆಯ ಆಡಳಿತಾಧಿಕಾರಿ ಹಾಗೂ ಪತ್ರಕರ್ತ ಬಸವರಾಜ್ ಉಳ್ಳಾಗಡ್ಡಿ ಮಾತನಾಡಿ ಶಾಲಾ ಮಕ್ಕಳಲ್ಲಿ ಚಿಕ್ಕವರಿರುವಾಗಲೇ ವ್ಯವಹಾರಿಕ ಜ್ಞಾನ, ಗಣಿತ, ಕೂಡಿಸುವುದು, ಕಳೆಯುವದು ಸೇರಿದಂತೆ ಎಲ್ಲ ಕೌಶಲಗಳು ಬರುತ್ತವೆ. ಮಕ್ಕಳ ಸಂತೆಯಿಂದ ಸ್ವತಃ ಅವರೇ ವ್ಯಾಪಾರ ಮಾಡಿದರು. ಇದರಿಂದ ಮಕ್ಕಳನ್ನು ನೋಡಿ ಎಲ್ಲರೂ ಕಲಿಯಬೇಕಾಗಿದೆ ಎಂದರು

ಕಾರ್ಯಕ್ರಮದಲ್ಲಿ ಮಹಾಕೂಟೇಶ್ವರ ಶಾಲೆಯ ಅಧ್ಯಕ್ಷ ವೊಜಯ ಕೊಪ್ಪದ, ವಿಶ್ವಭಾರತಿ ಪಬ್ಲಿಕ್ ಶಾಲೆಯ ಅಧ್ಯಕ್ಷ ಸಂಗಮೇಶ ಕಂಬಾರ, ಮಹಾಕೂಟೇಶ್ವರ ಶಾಲೆಯ ಆಡಳಿತಾಧಿಕಾರಿ ವಿಕ್ರಮ ಕೊಪ್ಪದ, ಬಸವರಾಜ್ ಕೊಪ್ಪದ, ಗುರುಮಾತೆ ಸಾವಿತ್ರಿ, ಸಹಶಿಕ್ಷಕರು. ಸಿಬ್ಬಂದಿಗಳು ಭಾಗವಹಿಸಿದ್ದರು ಪಾಲಕರು ವಸ್ತುಗಳನ್ನು ಮಕ್ಕಳ ಸಂತೆಯಲ್ಲಿ ಖರೀದಿ ಮಾಡಿದರು. ಮಕ್ಕಳು ತಂದಂತಹ ಎಲ್ಲ ಕಾಯಿಪಲ್ಲೆ ವಸ್ತುಗಳನ್ನು ಜನರು ಖರೀದಿ ಮಾಡಿದರು. ಮಕ್ಕಳ ಪಾಲಕರು ಸಂತೋಷ ಪಟ್ಟರು.

# ಪ್ರತಿಭೆ ಅರಳಲು ವಾರ್ಷಿಕ ಸ್ನೇಹ ಸಮ್ಮೇಳನ ಸೂಕ್ತ ವೇದಿಕೆ





**ಲೋಕಾಪುರ :** ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕರ ಹಾಗೂ ಪೋಷಕರ ಪಾತ್ರ ಮಹತ್ತರವಾಗಿದೆ ಎಂದು ರಾಜ್ಯ ಸಹಕಾರ ಕುರಿ ಮಹಾಮಂಡಳ ಉಪಾಧ್ಯಕ್ಷ ಕಾಶಿನಾಥ ಹುಡೇದ ಹೇಳಿದರು.

ಪಟ್ಟಣದ ಶ್ರೀ ರಾಮಕೃಷ್ಣ ಪರಮಹಂಸ ಶಿಕ್ಷಣ ಸಂಸ್ಥೆ ಸಿರಿಗನ್ನಡ ಪೂರ್ವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಶಾರದಾ ಮಾತಾ ಆಂಗ್ಲ ಮಾಧ್ಯಮ ಶಾಲೆ, ಶ್ರೀ ಸ್ವಾಮಿ ವಿವೇಕಾನಂದ ನವೋದಯ ತರಬೇತಿ ಕೇಂದ್ರ ಸಹಯೋಗದಲ್ಲಿ ಶಾಲೆ ಆವರಣದಲ್ಲಿ "ವಿವೇಕೋತ್ಸವ–2025" ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಕ್ಕಳಲ್ಲಿ ಹುದುಗಿರುವ ಪ್ರತಿಭೆ ಅರಳಲು ವಾರ್ಷಿಕ ಸ್ನೇಹ ಸಮ್ಮೇಳನ ಸೂಕ್ತ ವೇದಿಕೆಯಾಗಿದೆ. ಮಕ್ಕಳ ಪ್ರತಿಭೆಯನ್ನು ಗುರ್ತಿಸಿ ಬೆಳಕಿಗೆ ತರುವ ನಿಟ್ಟಿನಲ್ಲಿ ರಾಮಕೃಷ್ಣ ಪರಮಹಂಸ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಸಿದ್ದು ಹೂಗಾರ ಅವರ ಕಾರ್ಯ ಶ್ಲಾಘನೀಯ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವಿವೇಕಾನಂದ ಎಂ ಮಾತನಾಡಿ ಶಿಕ್ಷಕರು ಮಕ್ಕಳಿಗೆ ಗುಣಾತ್ಮಕ ಸಂಸ್ಕಾರದ ಪಠ್ಯದಜೊತೆಗೆಸ್ಪರ್ದಾತ್ಮಕವಿಷಯಾಧಾರಿತ ಶಿಕ್ಷಣ ನೀಡಿದಾಗ ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವನೆ ಮೂಡಲು ಸಾದ್ಯವೆಂದು ಹೇಳಿದರು.

ಈ ವೇಳೆ ಜಿಲ್ಲಾ ಉದಯವಾಣಿ ಪತ್ರಿಕೆ ವರದಿಗಾರರಾದ ಶ್ರೀಶೈಲ ಬಿರಾದಾರ, ಧಾರವಾಡದ ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕರಾದ ಬಿ.ಎಚ್. ಗೋನಾಳ ಅವರು ಮಾತನಾಡಿದರು.

ವಿವೇಕ ಚೇತನ ಪ್ರಶಸ್ತಿ ಪುರಸ್ಕಾರ: ಈ ಸಂದರ್ಭದಲ್ಲಿ ಧಾರವಾಡದ ಸಾರ್ವಜನಿಕ ಶಿಕ್ಷಣಇಲಾಖೆನಿವೃತ್ತಜಂಟಿನಿರ್ದೇಶಕರಾದ ಬಿ.ಎಚ್. ಗೋನಾಳ ದಂಪತಿಗಳಿಗೆ ವಿವೇಕ ಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಾಧಕರಿಗೆ ಸನ್ಮಾನ: ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹನೀಯರಾದ ಜಿಲ್ಲಾ ಗಣರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ಪತ್ರಕರ್ತ ಸಲೀಮ ಕೊಪ್ಪದ, ಕರ್ನಾಟಕ ಬಯಲಾಟ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತ ಹಾಗೂ ಪಾರಿಜಾತ ಕಲಾವಿದ ನಾರಾಯಣ ಪತ್ತಾರ, ಕರ್ನಾಟಕ ಬಯಲಾಟ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪುರಸ್ಕೃತ ಗ್ಯಾನಪ್ಪ ಮಾದರ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ರತ್ನಾ ಕಾಳಮ್ಮನವರ ಹಾಗೂ ದುರಗವ್ವ ರೊಡ್ಡಪ್ಪನವರ,

ಸೊಸಿಯಲ್ ಮಿಡಿಯಾದಲ್ಲಿ ಸಾಮಾಜಿಕ ಸೇವೆ ಸಲ್ಲಿಸುತ್ತಿರುವ ಪ್ರಭು ಬೋಳಿಶೆಟ್ಟಿ ಹಾಗೂ ಬಸವರಾಜ ಕುಂದರಗಿ ಈ ಎಲ್ಲ ಮಹನೀ ಯರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಸಾಧನೆಗೈದ ಮಕ್ಕಳಿಗೆ ಸನ್ಮಾನ: ಈ ಸಂದರ್ಭದಲ್ಲಿ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾಗಿ ಸಾಧನೆಗೈದ ಮಕ್ಕಳಿಗೆ ಶಾಲೆ ವತಿಯಿಂದ ಸನ್ಮಾನಿಸಲಾಯಿತು. ನಂತರ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನೋಡುಗರ ಗಮನ ಸೆಳೆಯಿತು. ಶಿಕ್ಷಕ ರವಿಕುಮಾರ ಸನದಿ ಶಾಲಾ ವರದಿ ವಾಚನ ಮಂಡಿಸಿದರು.

ರಾಜ್ಯ ಸಹಕಾರ ಕುರಿ ಮಹಾಮಂಡಳ ಉಪಾಧ್ಯಕ್ಷ ಕಾಶಿನಾಥ ಹುಡೇದ ಅಧ್ಯಕ್ಷತೆ ವಹಿಸಿದ್ದರು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವಿವೇಕಾನಂದ ಎಂ, ಧಾರವಾಡದ ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಬಿ.ಎಚ್. ಗೋನಾಳ, ಜಿಲ್ಲಾ ವರದಿಗಾರರಾದ ಶ್ರೀಶೈಲ ಬಿರಾದಾರ, ಜಗದೀಶ ಗಾಣಿಗೇರ ಹಾಗೂ ಸಂತೋಷ ದೇಶಪಾಂಡೆ, ಕಸಾಪ ಗೌರವ ಕಾರ್ಯದರ್ಶಿ ಪ್ರವೀಣ ಗಂಗಣ್ಣವರ, ಚಿದಂಬರೇಶ್ವರ ಬ್ಯಾಂಕ್ ಅಧ್ಯಕ್ಷ ಸಂತೋಷ ದೇಶಪಾಂಡೆ, ರಾಮಕೃಷ್ಣ ಪರಮಹಂಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಿದ್ದು ಹೊಳಬಸಪ್ಪ ಹೂಗಾರ, ಸಂಸ್ಥೆ ಉಪಾಧ್ಯಕ್ಷ ಹೊಳಬಸಪ್ಪ ಹೂಗಾರ, ಶಕುಂತಲಾ ಹೆಬ್ಬಳ್ಳಿಮಠ, ಶಿವಪ್ಪ ಹೂಗಾರ, ಶಿಕ್ಷಕವೃಂದ, ಪಾಲಕರು, ಮಕ್ಕಳು ಇದ್ದರು.

ಶಾಲೆ ಕೋ ಆರ್ಡಿನೇಟರ್ ಮಂಜುಳಾ ದಂಡಗಿ ಸ್ವಾಗತಿಸಿದರು. ಕೃಷ್ಣಾ ದಳವಾಯಿ ಮತ್ತು ಪ್ರವಿತ್ರಾ ಮುತ್ತನ್ನವರ ನಿರೂಪಿಸಿದರು. ಕೆ.ಪಿ. ಯಾದವಾಡ ವಂದಿಸಿದರು.

## 5ನೇ ರಾಜ್ಯ ಹಣಕಾಸು ಆಯೋಗದ ಸಭೆ; ಇಲಾಖೆಗಳ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಆಯೋಗದಿಂದ ಶಿಫಾರಸ್ಸು
# ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು: ಡಾ. ಸಿ. ನಾರಾಯಣಸ್ವಾಮಿ

**ಬೆಳಗಾವಿ:** ಆಸ್ತಿತೆರಿಗೆ, ಉದ್ದಿಮೆ ಪರವಾನಗಿ, ಬಾಡಿಗೆ ಆದಾಯ, ಬಳಕೆದಾರರ ಶುಲ್ಕ, ಇನ್ನಿತರ ಸಂಗ್ರಹ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕೆ ನಗರ ಸ್ಥಳೀಯ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು 5ನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಡಾ. ಸಿ ನಾರಾಯಣಸ್ವಾಮಿ ಅವರು ತಿಳಿಸಿದರು.



ಜಿಲ್ಲಾಪಂಚಾಯತ್ ಸಭಾಂಗಣದಲ್ಲಿನಡೆದ ಪಂಚಾಯತ್ ರಾಜ್ ವಿಷಯಗಳ ಕುರಿತು 5ನೇ ರಾಜ್ಯ ಹಣಕಾಸು ಆಯೋಗದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿವಿಧ ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ಆಯೋಗದಿಂದ ಶಿಫಾರಸು ಮಾಡಲಾಗುವುದು. ಕಟ್ಟಡ ತೆರಿಗೆ, ವಾಣಿಜ್ಯ ಮಳಿಗೆಗಳ ತೆರಿಗೆ ಬಾಕಿ ವಸೂಲಾತಿಗಳನ್ನು ಕ್ರಮ ವಹಿಸಬೇಕು ಎಂದರು.

ಪ್ರತಿ ಪಂಚಾಯತಿಗಳಿಂದ ಬರುವ ಆದಾಯವನ್ನು ಅನುದಾನದ ರೂಪದಲ್ಲಿ ಸಾರ್ವಜನಿಕರಿಗೆ ಪ್ರೋತ್ಸಾಹವಾಗಿ ನೀಡಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ಡಾ. ಸಿ ನಾರಾಯಣಸ್ವಾಮಿ ತಿಳಿಸಿದರು.

ಜಿಲ್ಲಾ ಪಂಚಾಯತ್ ನಲ್ಲಿ ಹೊರಗುತ್ತಿಗೆ ಅದರದಮೇಲೆ 13 ಜನ ಕಾರ್ಯ ನಿರ್ವಹಿಸುತ್ತಿದ್ದಾರೆ. ಇತರೆ 325 ಒಟ್ಟು ಮಂಜೂರಾದ ಹುದ್ದೆಗಳಲ್ಲಿ 129 ಹುದ್ದೆಗಳು ಮಾತ್ರ ಮಂಜೂರಾಗಿವೆ. ಅದರಲ್ಲಿ ಒಟ್ಟು 196 ಹುದ್ದೆಗಳು ಭರ್ತಿಯಾಗಬೇಕಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅವರು ತಿಳಿಸಿದರು.

ಗ್ರಾಮ ಪಂಚಾಯತಿಗಳಲ್ಲಿ ಒಟ್ಟು ಕಾರ್ಯದರ್ಶಿ ಗ್ರೇಡ್ 1 ಮತ್ತು ಗ್ರೇಡ್ 2 ಹಾಗೂ ಪ್ರಥಮ ದರ್ಜೆ, ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳು ನಿಯಮಾನುಸಾರ ಭರ್ತಿಯಾಗಬೇಕಿದೆ.

ಪ್ರತಿ ಗ್ರಾಮ ಪಂಚಾಯಿತಿಗಳಿಗೆ 15ನೇ ಹಣಕಾಸು ಯೋಜನೆಯಡಿ 2023–24ನೇ ಸಾಲಿನಲ್ಲಿ ಸರಾಸರಿ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಆರ್ಥಿಕ ವರ್ಷದಲ್ಲಿ 15ನೇ ಹಣಕಾನು ಯೋಜನೆಯ ಒಟ್ಟು ಹಂಚಿಕೆಯ ಪ್ರತಿಶತ 30ರಷ್ಟು ಅನುದಾನ ನಿಗದಿಯಾಗುತ್ತಿದ್ದು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅನುದಾನದೊಂದಿಗೆ ಕುಡಿಯುವ ನೀರಿನ ನಿರ್ವಹಣೆಗಾಗಿ ವೆಚ್ಚ ಭರಿಸಲಾಗುತ್ತಿದೆ.

ಅಲ್ಲದೆ ಗ್ರಾಮ ಪಂಚಾಯಿತಿಗಳ ಸ್ವಂತ ಸಂಪನ್ಮೂಲದಲ್ಲಿ ಕುಡಿಯುವ ನೀರಿನ ನಿರ್ವಹಣೆಗೆ ಬೇಡಿಕೆಗೆ ಅನುಗುಣವಾಗಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ. ಪ್ರಸ್ತುತ ಜಲಜೀವನ್ ಮಿಷನ್ ಯೋಜನೆಯಡಿ 171766 ಕುಟುಂಬಗಳಿಗೆ ಮತ್ತು 373 ಜನವಸತಿಗಳಿಗೆ ಮನೆ–ಮನೆ–ನಲ್ಲಿ ಸಂಪರ್ಕ ನೀಡಲಾಗುವುದರಿಂದ ನಿರ್ವಹಣ ಖರ್ಚು ಕಡಿಮೆಯಾಗಿರುತ್ತದೆ ಎಂದು ಹೇಳಿದರು.

ಖರ್ಚು ನಿರ್ವಹಣೆಗೆ ಪ್ರತಿ ಮಾಹೆವಾರು ಬಿಲ್ಲುಗಳನ್ನು ಹೆಸ್ಕಾಂ ಸರಿಯಾಗಿ ನೀಡಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಲಾಗುವುದು. ಯೂನಿಟ್ ಬಳಕೆ, ಬಾಕಿ ಇರುವ ಬಿಲ್ಲುಗಳು ಪರಿಶೀಲನೆ, ನಿಷ್ಕ್ರಿಯೆ ಗೊಂಡಿರುವ ಕೊಳವೆ ಬಾವಿ, ವಿದ್ಯುತ್ ಸ್ಥಾವರಗಳು ವಿವರ ಬಿಲ್ಲುಗಳಲ್ಲಿರುವ ವ್ಯತ್ಯಾಸಗಳು ಪರಿಶೀಲಿಸಲಾಗುತ್ತಿದೆ ಎಂದರು.

5ನೇ ರಾಜ್ಯ ಹಣಕಾಸು ಆಯೋಗದ ಪರಿಶೀಲಾನಾಂಶಗಳಿಗೆ

ಪೂರಕ ವಿಷಯಗಳು:

ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ. ಪರಿಶಿಷ್ಟ ವರ್ಗಗಳ ಕಲ್ಯಾಣ. ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಿಗೆ ಸಂಬಂಧಿಸಿದಂತೆ ಮೂಲಭೂತಸೌಕರ್ಯಗಳನ್ನುಒದಗಿಸಲು ಹೆಚ್ಚಿನ ಅನುದಾನವನ್ನು ಒದಗಿಸುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಅನುವು ಮಾಡಿಕೊಡುವುದು.

ಗ್ರಾಮೀಣ ರಸ್ತೆಗಳ ನಿರ್ಮಾಣ, ದುರಸ್ತಿ/ನಿರ್ವಹಣೆಗಾಗಿ ಹೆಚ್ಚಿನ ಅನುದಾನ ನೀಡುವ ಮೂಲಕ ಸಾರಿಗೆ ವ್ಯವಸ್ಥೆಯನ್ನು ಗ್ರಾಮೀಣ ಜನರಿಗೆ ಸುಗಮಗೊಳಿಸುವುದು.

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿಹಾಗೂಜಿಲ್ಲಾಪಂಚಾಯತ್‌ನ ಶಿಕ್ಷಣ. ಆರೋಗ್ಯ, ಮಹಿಳಾ ಮತ್ತು ಮಕ್ಕಳ ಹಾಗೂ ಇತರೆ ಇಲಾಖೆಗಳ ಸರ್ಕಾರಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನವೀಕರಣಕ್ಕೆ ಹೆಚ್ಚಿನ ಅನುದಾನ ಒದಗಿಸುವುದು.

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತ್‌ನ ಹಾಗೂ ಇತರ ಇಲಾಖೆಗಳ ಸರ್ಕಾರಿ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಸಾರ್ವಜನಿಕರಿಗೆ ಸರ್ಕಾರಿ ಸೇವೆಗಳನ್ನು ಇನ್ನೂ ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುಕೂಲ ಮಾಡಿಕೊಡುವುದು.

ಸರ್ಕಾರದಯೋಜನೆಗಳನ್ನುಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನುಪರಿಣಾಮಕಾರಿಯಾಗಿಅನುಷ್ಠಾನಗೊಳಿಸಲು ಅನುಕೂಲವಾಗುವಂತ ಅಡಳಿತ ಸುಧಾರಣೆಗಳನ್ನು ಜಾರಿಗೆ ತರುವುದು ಮತ್ತು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸುವುದು ಆಯೋಗದ ಗಮನಕ್ಕೆ ತರಬಹುದಾದ ಇತರೆ ವಿಷಯಗಳು ಮತ್ತು ಸಲಹೆಗಳ ಕುರಿತು ಸಿಇಓ ರಾಹುಲ್ ಶಿಂಧೆ ಅವರು ವಿವರಿಸಿದರು.

ಗ್ರಾಮ ಪಂಚಾಯತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹಣಕಾಸು ಆಯೋಗ ಕಳುಹಿಸಿರುವ ಪ್ರಶ್ನಾವಳಿ ಕುರಿತ ಮಾಹಿತಿಯನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಬಳಿಕ ಪಂಚಾಯಿತಿ ಸಂಸ್ಥೆಗಳ ಸಾಂಸ್ಥಿಕ ರಚನೆ, ಕಾರ್ಯಾಚರಣೆ, ಹುದ್ದೆಗಳು, ಆಯವ್ಯಯ, ವೆಚ್ಚಗಳ ವಿವರ, ರಾಜ್ಯ ಮತ್ತು ಕೇಂದ್ರ ಹಣಕಾಸು ಆಯೋಗದ ಅನುದಾನ, ಹಂಚಿಕೆ, ಬಿಡುಗಡೆ, ಮಾಡಲಾದ ವೆಚ್ಚ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾ ನಿರ್ದೇಶಕ ಗಂಗಾಧರ್ ದಿವಟರ್ ವಿವರಿಸಿದರು.

ಸಭೆಯಲ್ಲಿ ಆಡಳಿತ ಸುಧಾರಣೆ, ಮಾಹಿತಿ ತಂತ್ರಜ್ಞಾನ, ರಾಜ್ಯ ಹಣಕಾಸು ಆಯೋಗದ ಪರಿಶೀಲನಾ ಅಂಶಗಳಿಗೆ ಪೂರಕವಾದ ಸಲಹೆಗಳನ್ನು ಪಡೆಯಲಾಯಿತು.

ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿ ಖಾತಾ ಪ್ರತಿ ದಾಖಲೆಗಳನ್ನು ತ್ವರಿತವಾಗಿ ನೀಡುವಿಕೆ, ನೀರು ಸರಬರಾಜು, ಒಳಚರಂಡಿ, ಬೀದಿ ದೀಪಗಳು, ಘನತ್ಯಾಜ್ಯ ನಿರ್ವಹಣೆ, ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ವಿವರಿಸಿದರು.

ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಮೂಲ ಸೌಕರ್ಯ ಒದಗಿಸಲು ಹೆಚ್ಚು ಅನುದಾನ, ವಿವಿಧ ಮಂಜೂರು ಅಗತ್ಯತೆ ಸೇರಿದಂತೆ ಬೇರೆಬೇರೆ ವಿಷಯಗಳ ಕುರಿತು ಆಯೋಗದ ಅಧ್ಯಕ್ಷರಿಗೆ ವಿನಂತಿಸಿದರು.

ಅದೇ ರೀತಿಯಲ್ಲಿ ಅಧಿಕಾರಿಗಳೂ ಸಹ ಸಂಸ್ಥೆಗಳಿಗೆ ಅಗತ್ಯವಿರುವ ಹೆಚ್ಚಿನ ಅನುದಾನ ಹಾಗೂ ನೆರವಿನ ಬಗ್ಗೆ ಪ್ರಸ್ತಾಪಿಸಿ ಆಯೋಗದ ಮುಂದೆ ಅಭಿಪ್ರಾಯಗಳನ್ನು ತಿಳಿಸಿದರು.

5ನೇ ರಾಜ್ಯ ಹಣಕಾಸು ಆಯೋಗದ ಸದಸ್ಯರಾದ ಮೊಹಮ್ಮದ್ ಸನಾವುಲ್ಲಾ, ಆರ್. ಫೊಂಡೆ, ಸಮಾಲೋಚಕರಾದ ಎಂ.ಕೆ ಕೆಂಪೇಗೌಡ, ಸಿ.ಜಿ ಸುಪ್ರಸನ್ನ, ವಿಶೇಷಾಧಿಕಾರಿ ಇ. ಎಂ ವಹಾಬ್, ಮಹಾನಗರ ಪಾಲಿಕೆ ಮೇಯರ್ ಸವಿತಾ ಕಾಂಬಳೆ, ಉಪ ಮೇಯರ್ ಆನಂದ ಚವ್ಹಾಣ, ಮಹಾನಗರ ಪಾಲಿಕೆ ಆಯುಕ್ತರಾದ ಶುಭ.ಬಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ್ ಕಲಾದಗಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಮಹಾಂತೇಶ ಮುರಗೋಡ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಡಾ. ಜಗದೀಶ ಸರಿಕರ್ ನೇಮಕ

**ಬೆಳಗಾವಿ :** ಬೆಳಗಾವಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ನೂತನ ಅಧ್ಯಕ್ಷರಾಗಿ ಡಾ. ಜಗದೀಶ ಸರಿಕರ್ ಅವರು ನೇಮಕಗೊಂಡಿರುತ್ತಾರೆ. ದುರಗಪ್ಪ ಮಾಚನೂರು, ಸದಾಶಿವ ಕಾಂಬಳೆ, ಪ್ರಶಾಂತ ಕೋಣೆ ಹಾಗೂ ಶೈಲಜಾ ಕುರಬೇಟ ಇವರುಗಳು ಸದಸ್ಯರುಳಾಗಿ ನೇಮಕಗೊಂಡು ಅಧಿಕಾರಿ ಸ್ವೀಕರಿಸಿರುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ನಂದಿಹಳ್ಳಿ–ಗರ್ಲಗುಂಜಿ ಸಂಪರ್ಕ ರಸ್ತೆಗೆ ಭೂಮಿ ಪೂಜೆ



**ಬೆಳಗಾವಿ :** ಬೆಳಗಾವಿ ಗ್ರಾಮೀಣ ಕ್ಷೇತ್ರದ ನಂದಿಹಳ್ಳಿ ಗ್ರಾಮದಿಂದ ಗರ್ಲಗುಂಜಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಸೇರಿ ಬುಧವಾರ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ವಿಶೇಷ ಪ್ರಯತ್ನದಿಂದ ಅನುದಾನ ಮಂಜೂರಾಗಿದ್ದು, ಸುಮಾರು 3 ಕೋಟಿ ರೂ.ಗಳ ವೆಚ್ಚದಲ್ಲಿ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಸ್ಥಳೀಯರ ಸಲಹೆ ಪಡೆದು, ಗುಣಮಟ್ಟದ ರಸ್ತೆ ನಿರ್ಮಾಣ ಮಾಡುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

ಈ ಸಂದರ್ಭದಲ್ಲಿ ಯುವರಾಜ ಕದಂ, ಸಿ.ಸಿ.ಪಾಟೀಲ, ಮಹಾದೇವ ಜಾಧವ್, ಸಂಜು ಮಾದರ್, ಮಲ್ಲಿಕಾರ್ಜುನ ಲೋಕೂರ್ ಮುಂತಾದವರು ಉಪಸ್ಥಿತರಿದ್ದರು.

# ಸಕಾಲದಲ್ಲಿ ಸಾಲ ಮರುಪಾವತಿಸಿ ಬ್ಯಾಂಕಿನ ಪ್ರಗತಿಗೆ ಸಹಕರಿಸಿ: ವಿಜಯಕುಮಾರ




**ಬೆಟಗೇರಿ:** ಗ್ರಾಮೀಣ ವಲಯದ ಕೆನರಾ ಬ್ಯಾಂಕ್‌ಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ರೈತರಿಗೆ ಮತ್ತು ಸ್ವಸಹಾಯ ಸಂಘಗಳಿಗೆ ಹಾಗೂ ಗ್ರಾಹಕರಿಗೆ, ದೊರಕುವ ಸಾಲ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹುಬ್ಬಳ್ಳಿಯ ಕೆನರಾ ಬ್ಯಾಂಕ್ ಸರ್ಕಲ್ ಆಫೀಸ್‌ನ ಜನರಲ್ ಮ್ಯಾನೇಜರ್ ವಿಜಯಕುಮಾರ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ಕೆನರಾ ಬ್ಯಾಂಕ್ ಶಾಖೆಯ ವತಿಯಿಂದ ಇತ್ತೀಚೆಗೆ ನಡೆದ ಕೃಷಿ ಮತ್ತು ಸ್ವ ಸಹಾಯ ಸಂಘಗಳ ಸಾಲ ವಿತರಣೆ ಹಾಗೂ ಜಾಗೃತಿ ಶಿಬಿರದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಬೆಟಗೇರಿ ಕೆನರಾ ಬ್ಯಾಂಕ್ ಶಾಖೆ ವ್ಯಾಪ್ತಿಯ ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ರೈತರು, ಸ್ವಸಹಾಯ ಸಂಘಗಳ ಪ್ರತಿನಿಧಿಗಳು, ಗ್ರಾಹಕರು, ಸಾರ್ವಜನಿಕರ ಸಹಕಾರ ಮುಖ್ಯವಾಗಿದೆ. ಕೆನರಾ ಬ್ಯಾಂಕ್ ಶಾಖೆಗಳಿಂದ ವಿವಿಧ ಯೋಜನೆಯಡಿಯಲ್ಲಿ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸಿ ಬ್ಯಾಂಕಿನ ಪ್ರಗತಿಗೆ ಪ್ರತಿಯೊಬ್ಬರೂ ಸಹಕರಿಸಬೇಕು ಎಂದರು.

ಬೆಟಗೇರಿ ಕೆನರಾ ಬ್ಯಾಂಕ್ ಶಾಖೆಯ ಮ್ಯಾನೇಜರ್ ಜಗದೀಶ ಜಾಧವ ಪ್ರಾಸ್ತಾವಿಕವಾಗಿ ಮಾತನಾಡಿ, ಕೆನರಾ ಬ್ಯಾಂಕಿನಿಂದ ದೊರಕುವ ವಿವಿಧ ಯೋಜನೆಯ ಸಾಲ, ಸಹಾಯ ಸೌಲಭ್ಯಗಳ ಕುರಿತು ತಿಳಿಸಿದರು. ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ರೈತರು, ಸ್ವಸಹಾಯ ಸಂಘಗಳ ಪ್ರತಿನಿಧಿಗಳು, ಗ್ರಾಹಕರು, ಸಾರ್ವಜನಿಕರು ಸ್ಥಳೀಯ ಕೆನರಾ ಬ್ಯಾಂಕ್‌ನಿಂದ ದೊರಕುವ ವಿವಿಧ ಸಾಲ, ಸಹಾಯಗಳ ಕುರಿತು ಚರ್ಚಿಸಿದ ಬಳಿಕ ಎಲ್ಲರಿಗೂ ಸಿಹಿ ವಿತರಿಸಲಾಯಿತು.

ಚಿಕ್ಕೋಡಿ ಕೆನರಾ ಬ್ಯಾಂಕ್ ರಿಜನಲ್ ಆಫೀಸ್‌ನ ಡಿವಿಜಿನಲ್ ಮ್ಯಾನೇಜರ್ ರಾಜೇಶಕುಮಾರ, ಕುಲಗೋಡ ಕೆನರಾ ಬ್ಯಾಂಕ್ ಶಾಖೆಯ ಮ್ಯಾನೇಜರ್ ಹರೀಶಕುಮಾರ, ಚಿಕ್ಕೋಡಿ ರಿಜನಲ್ ಆಫೀಸ್ ಮ್ಯಾನೇಜರ್ ರವೀಂದ್ರ.ಕೆ., ಅರಳಿಮಟ್ಟಿ ಕೆನರಾ ಬ್ಯಾಂಕ್ ಶಾಖೆಯ ಮಾನೇಜರ್ ಮಂಜುನಾಥ, ಸ್ಥಳೀಯ ಕೆನರಾ ಬ್ಯಾಂಕಿನ ಪೀಲ್ಡ್ ಆಫೀಸರ್ ಮಲ್ಲಿಕಾರ್ಜುನ ನಿಂಬರಗಿ, ಸೋನಾಲಿ ನಾಯ್ಕ, ಪೃಥ್ವಿ ರಡ್ಡಿ, ಈರಯ್ಯ ಹಿರೇಮಠ, ಮುತ್ತೆಪ್ಪ ಕುರುಬರ, ಅಚಲ್, ರಮೇಶ ಪಾಟೀಲ, ಮಹೇಶ ಪತ್ತಾರ, ಬಸವರಾಜ, ಬೆಟಗೇರಿ ಕೆನರಾ ಬ್ಯಾಂಕ್ ಶಾಖೆಯ ಸಿಬ್ಬಂದಿ, ಬೆಟಗೇರಿ ಕೆನರಾ ಬ್ಯಾಂಕ್ ಶಾಖೆ ವ್ಯಾಪ್ತಿಯ ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ರೈತರು, ಸ್ವಸಹಾಯ ಸಂಘಗಳ ಪ್ರತಿನಿಧಿಗಳು, ಗ್ರಾಹಕರು, ಸಾರ್ವಜನಿಕರು, ಇತರರು ಇದ್ದರು.

# ಜೀತ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶ್ರಮಿಸಿ: ಜಿಲ್ಲಾಧಿಕಾರಿ ನಲಿನ್ ಅತುಲ್



**ಕೊಪ್ಪಳ :** ಜೀತ ಕಾರ್ಮಿಕ ಪದ್ಧತಿಯು ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದು, ಇಂತಹ ಅಮಾನವೀಯ ಪದ್ಧತಿಯನ್ನು ಹೋಗಲಾಡಿಸಲು ಹಾಗೂ ಜನರಲ್ಲಿ ಜಾಗೃತಿ ಮೂಡಿಸಲು ಅಧಿಕಾರಿಗಳು ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಸೋಮವಾರ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾರ್ಮಿಕ ಇಲಾಖೆ ಹಾಗೂ ಬೆಳಗಾವಿ (ಕೊಪ್ಪಳ ಘಟಕ) ಸ್ಪಂದನ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಜೀತ ಕಾರ್ಮಿಕ ಪದ್ಧತಿ ನಿರ್ಮೂಲನಾ ದಿನದ ಅಂಗವಾಗಿ ಕೊಪ್ಪಳ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಹಮ್ಮಿಕೊಳ್ಳಲಾದ ಒಂದು ದಿನದ ತರಬೇತಿ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು.

ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ 1976ರಲ್ಲಿಕಾಯ್ದೆಜಾರಿಗೆಬಂದಿದೆ.ರಾಜ್ಯದಲ್ಲಿ ಜೀತ ಪದ್ಧತಿಯನ್ನು ನಿಯಂತ್ರಣಗೊಳಿಸಿ ನಿರ್ಮೂಲನೆ ಮಾಡಲು ಜೀತ ಕಾರ್ಮಿಕ ಪದ್ಧತಿ ನಿಷೇಧ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಜಿಲ್ಲಾಧಿಕಾರಿಯಿಂದ ಗ್ರಾಮ ಆಡಳಿತಾಧಿಕಾರಿವರೆಗಿನ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿದೆ. ಜೀತ ಪದ್ಧತಿ ನಿರ್ಮೂಲನಾಧಿಕಾರಿಗಳು,ಜೀತಕಾರ್ಮಿಕ ಪ್ರಕರಣಗಳನ್ನು ಸೂಕ್ತ ಪ್ರಾಧಿಕಾರಕ್ಕೆ ವರದಿ ಮಾಡಬೇಕು. ಈ ಪದ್ಧತಿಯನ್ನು ತಡೆಯಲು ಸಹ ಕ್ರಮವಹಿಸಬೇಕು. ಜೀತ ಪದ್ಧತಿಗೆ ಒತ್ತಾಯಿಸಿದ ಆರೋಪಿಗಳ ವಿರುದ್ಧ ಪರಿಣಾಮಕಾರಿಯಾಗಿ ಅಭಿಯೋಜನೆಗೆ ಒಳಪಡಿಸಲು ಸಾಕ್ಷ್ಯ ಸಂಗ್ರಹಣೆಗೆ ಸಹಕರಿಸಬೇಕು ಎಂದರು.

ಜೀತ ಪದ್ಧತಿ ಶಿಕ್ಷಾರ್ಹ ಅಪರಾಧವೆಂದು, ಜೀತ ಪದ್ಧತಿಯನ್ನು ಮುಂದುವರೆಸುವಂತಿಲ್ಲವೆಂದು ಸಾರ್ವಜನಿಕರಿಗೆ, ಉದ್ಯಮಿಗಳಿಗೆ ಅರಿವು ಮೂಡಿಸಬೇಕು. ಈ ಕುರಿತುಸಂವೇದನೆಯನ್ನುಸಾರ್ವಜನಿಕರಲ್ಲಿ ಮೂಡಿಸಲು ಕ್ರಮ ವಹಿಸಬೇಕು. ಇದರ ಜೊತೆಗೆ ಜೀತ ವಿಮುಕ್ತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪೂರಕ ಕ್ರಮಗಳನ್ನು ಅನುಸರಿಸಬೇಕು. ಅವರಿಗೆ ಅಗತ್ಯವಿರುವ ಕಾನೂನು ಸಲಹೆ, ಪೊಲೀಸ್ ನೆರವು ಪಡೆಯಲು ಸಹಕರಿಸಬೇಕು ಹಾಗೂ ಜೀತ ವಿಮುಕ್ತ ಕಾರ್ಮಿಕರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರಯತ್ನಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಸುಧಾ ಜಿ ಗರಗ, ಮಾನವ ಕಳ್ಳ ಸಾಗಾಣಿಕೆ ಮತ್ತು ಜೀತ ಕಾರ್ಮಿಕ ಪದ್ಧತಿಯರಾಜ್ಯಉನ್ನತಸಮಿತಿಸದಸ್ಯರಾದ ವಿಲಿಯಂ ಕ್ರಿಸ್ಟೋಫರ್, ಯುನಿಸೆಫ್ ಪ್ರಾದೇಶಿಕ ಸಂಯೋಜಕ ರಾಘವೇಂದ್ರ ಭಟ್, ಯುನಿಸೆಫ್ ಸಂಯೋಜಕ ಹರೀಶ ಜ್ಯೋಗಿ, ಬೆಳಗಾವಿ ಸ್ಪಂದನ ಸಂಸ್ಥೆಯ ಕಾರ್ಯದರ್ಶಿ ವಿ.ಸುಶೀಲ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ನಿರ್ದೇಶಕ ಬಸವರಾಜ ಹಿರೇಗೌಡರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ವಿಲಿಯಂ ಕ್ರಿಸ್ಟೋಫರ್ ಅವರು ಜೀತ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು,ರಾಘವೇಂದ್ರಭಟ್‌ಅವರುಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ ಬಗ್ಗೆ ಹಾಗೂ ಹರೀಶ ಜ್ಯೋಗಿ ಅವರು ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಕುರಿತು ತರಬೇತಿ ನೀಡಿದರು. ಕೊಪ್ಪಳ ಜಿಲ್ಲೆಯ ಜೀತ ಪದ್ಧತಿ ನಿರ್ಮೂಲನಾಧಿಕಾರಿಗಳು ಭಾಗವಹಿಸಿದ್ದರು.

# ಕೊಪ್ಪಳ ಬಂದಗೆ ಸಂಪೂರ್ಣ ಬೆಂಬಲ: ಚೋಪ್ರಾ ಘೋಷಣೆ



**ಕೊಪ್ಪಳ :** ನಗರಕ್ಕೆ ಸಮೀಪ ಎಂ ಎಸ್ ಪಿ ಎಲ್ ಇಂದ ಕೊಪ್ಪಳದಲ್ಲಿ ವಿಸ್ತೀರ್ಣ ಗೊಳ್ಳಲಿರುವ ಬೃಹತ್ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ವಿರೋಧಿಸಿ ಇದೇ ದಿ 24 ರಂದು ಕೊಪ್ಪಳ ಬಂದ್ ಗೆ ಕರೆ ನೀಡಿರುವ ಹಿನ್ನಲೆಯಲ್ಲಿ ಸದರಿ ಬಂದ್ ಗೆ ಕೊಪ್ಪಳದ ಜೈನ್ ಸಮಾಜ ಸೇರಿದಂತೆ ಸಮಾಜದ ವಿವಿಧ ಸಂಘಟನೆ ಗಳು ಸಂಪೂರ್ಣ ಬೆಂಬಲ ನೀಡಿರುವದಾಗಿ ಜೈನ್ ಸಮಾಜದ ಮುಖಂಡ ಕೊಪ್ಪಳ ನಗರಸಭೆಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಮಹೇಂದ್ರ ಚೋಪ್ರಾ ಘೋಷಿಸಿದ್ದಾರೆ,

ಈ ಕುರಿತು ಹೇಳಿಕೆ ನೀಡಿದ ಆವರು ಶ್ರೀ ಗವಿಮಠದ ಪರಮಪೂಜ್ಯ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ರವರ ಸೂಚನೆ ಮತ್ತು ಕರೆ ಮೇರೆಗೆ ಕೊಪ್ಪಳದ ಸಂಪೂರ್ಣ ಪ್ರವಾಸಿ ರಾಜಸ್ಥಾನಿ ಒಳಗೊಂಡಂತೆ ಜೈನ್ ಸಮುದಾಯದ ವ್ಯಾಪಾರಸ್ಥರು ಕೊಪ್ಪಳ ಬಂದ್ ಗೆ ಸಂಪೂರ್ಣ ಬೆಂಬಲ ನೀಡಿದೆ ಎಂದು ಮಹೇಂದ್ರ ಚೋಪ್ರಾ ತಿಳಿಸಿದ್ದಾರೆ, ಆ ದಿನ ಎಲ್ಲಾ ವ್ಯಾಪಾರ ವಹಿವಾಟ ಸ್ಥಗಿತಗೊಳಿಸಿ ಕೊಪ್ಪಳ ಬಂದ್ ಗೆ ಸಹಕಾರ ಮತ್ತು ಬೆಂಬಲ ನೀಡುವುದಾಗಿ ನಿರ್ಣಯಿಸಲಾಗಿದೆ ಎಂದು ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಕ್ಷೇತ್ರದ ಕೆರೆ ತುಂಬಿಸುವ ಯೋಜನೆಗೆ ಒತ್ತು: ಶಾಸಕ ಕೆ. ರಾಘವೇಂದ್ರ ಹಿಟ್ನಾಳ

## ಜನರಿಗೆ ಮೂಲಭೂತ ಸೌಲಭ್ಯ, ರಸ್ತೆ, ಆರೋಗ್ಯಕ್ಕೆ ಆದ್ಯತೆ ಮೇಲೆ ಅನುದಾನದ ಭರವಸೆ



**ಕೊಪ್ಪಳ :** ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ ಅವರು ಕೊಪ್ಪಳ ವಿಧಾನಸಭ ಕ್ಷೇತ್ರದ ಲೇಬಗೇರಿ ಜಿ. ಪಂ. ವ್ಯಾಪ್ತಿಯ ಹನುಮನಹಳ್ಳಿ, ಟನಕನಕಲ್, ಕಲಿಕೇರಿ, ಹಟ್ಟಿ ದೇವಲಾಪುರ ಹಾಗೂ ಚಿಲವಾಡಗಿ ಗ್ರಾಮಗಳಲ್ಲಿಅಂದಾಜುಮೊತ್ತ5.47ಕೋಟಿ ವೆಚ್ಚದಲ್ಲಿ ವಿವಿಧ ಕಾಮಗಾರಿಗಳ ಅಡಿಗಲ್ಲು ನೆರವೇರಿಸಿದರು.

ಕಲಿಕೇರಿ ಗ್ರಾಮದಲ್ಲಿ 1.50 ಕೋಟಿ ವೆಚ್ಚದಲ್ಲಿ ಕಲಿಕೇರಿ ಕೆರೆ ತುಂಬಿಸುವ ಯೋಜನೆಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಕ್ಷೇತ್ರದಲ್ಲಿನ ಎಲ್ಲಾ ಗ್ರಾಮಗಳ ಕೆರೆಗಳನ್ನು ಅಭಿವೃದ್ಧಿ ಪಡಿಸಿ ಕೆರೆಗಳನ್ನು ತುಂಬಿಸುತ್ತೇವೆ, ಕೆರೆಗಳಲ್ಲಿ ನೀರು ಇದ್ದರೆ ರೈತರ ಹೊಲದಲ್ಲಿರುವ ಬೋರವೆಲ್ ಗಳು ರಿಚಾರ್ಜ್ ಆಗಿ ಉತ್ತಮ ಬೆಳೆ ಬೆಳೆಯಲು ಸಹಕಾರಿ ಆಗುತ್ತೆ ಇದಲ್ಲದೆ ದನ-ಕರುಗಳಿಗೂಕೂಡಬೇಸಿಗೆದಿನದಲ್ಲೂ ಕುಡಿಯಲು ನೀರು ಸಿಗುವ ಉದ್ದೇಶದಿಂದ ಕಕೆರೆ ತುಂಬಿಸುವ ಯೋಜನೆಗೆ ಹೆಚ್ಚಿನ ಮಹತ್ವ ನೀಡಿದ್ದೇವೆ. 290 ಕೋಟಿ ವೆಚ್ಚದಲ್ಲಿ ಕೊಪ್ಪಳ -ಯಲಬುರ್ಗ ಕೆರೆ ತುಂಬಿಸುವ ಕಾಮಗಾರಿ ಕೂಡ ವೇಗವಾಗಿ ಸಾಗುತ್ತಿದೆ ಒಟ್ಟಾರೆ 13 ಕೆರೆಗಳಲ್ಲಿ ಕೊಪ್ಪಳ ತಾಲೂಕಿನ ಕೊಪ್ಪಳದ ಹುಲಿಕೇರಿ ಕೆರೆ, ಗಿಣಗೇರಿ ಕೆರೆ ಸೇರಿದಂತೆ ಸು.5 ಕೆರೆಗಳು ಇವೆ ಎಂದರು.

ಅಳವಂಡಿ ಹೋಬಳಿಯಲ್ಲಿ ಹೀಗಾಗಲೇ 21.50 ಕೋಟಿ ವೆಚ್ಚದಲ್ಲಿ ಸುಮಾರು 15 ಕೆರೆ ಗಳನ್ನು ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಕಳೆದ ಹದಿನೈದು ದಿನಗಳ ಹಿಂದೆ ನಮ್ಮ ಕ್ಷೇತ್ರದ ಬಹುದೊಡ್ಡ ಏತ ನೀರಾವರಿ ಯೋಜನೆ ಬಹದ್ದೂರ್ ಬಂಡಿ ನವಲ್ ಕಲ್ ನೀರಾವರಿ ಯೋಜನೆಯ ಪ್ರಾಯೋಗಿಕ ಚಾಲನೆ ನೀಡಿದ್ದೆವು ಅದರಡಿ ಬಹದ್ದೂರ್ ಬಂಡಿ ಹೊಸಳ್ಳಿ ಕೆರೆ ಸೇರಿದಂತೆ ಆ ಭಾಗದ ಎಲ್ಲಾ ಕೆರೆಗಳಿಗೆ ನೀರು ಹರಿಸುವ ಕೆಲಸ ಮಾಡುತ್ತೇವೆ ಎಂದರು.

ಕೊಪ್ಪಳ ವಿಧಾನಸಭ ಕ್ಷೇತ್ರದಲ್ಲಿ ಅಂದಾಜು 1000ಕೋಟಿವೆಚ್ಚದಲ್ಲಿಒಂದುಲಕ್ಷಹದಿನೆಂಟು ಸಾವಿರಎಕರೆನೀರಾವರಿಪ್ರದೇಶಕ್ಕೆನೀರಾವರಿ ಯೋಜನೆಗಳ ಕಾಮಗಾರಿ ನಡೆಯುತ್ತಿದೆ ಎಂದರು. ಚಿಲವಾಡಗಿ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಜೊತೆಗೆ ಚರ್ಚಿಸಿದರು. ಅಲ್ಲಿ ಉತ್ತಮಶಾಲೆಕಟ್ಟಲುನೀಲನಕ್ಷೆಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಿದರು. ಚಿಲವಾಡಗಿ ಶಾಲೆ ಮತ್ತು ಸ್ಮಶಾನದ ಜಾಗ ಸರಿಪಡಿಸಲು ಸಹ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ಸಂಧರ್ಭದಲ್ಲಿ ಮಾಜಿ ಜಿ. ಪಂ. ಸದಸ್ಯರುಗಳಾದ ಪ್ರಸನ್ನ ಗಡಾದ್, ರಾಮಣ್ಣ ಚೌಡ್ಕಿ, ಪಿ. ಎಲ್ ಡಿ ಬ್ಯಾಂಕ್ ಅಧ್ಯಕ್ಷರಾದ ರಾಮಣ್ಣ ಕಲ್ಲನ್ನವರ್, ಗ್ಯಾರಂಟಿ ಸಮಿತಿ ತಾಲೂಖ ಅಧ್ಯಕ್ಷ ಬಾಲಚಂದ್ರನ್ ಮುನಿರಬಾದ್, ಗ್ಯಾರಂಟಿ ಸಮಿತಿ ಜಿಲ್ಲಾ ಉಪಾಧ್ಯಕ್ಷಮಂಜುನಾಥ್‌ಜಿ.ಗೊಂಡಬಾಳ, ಮುಖಂಡರುಗಳಾದ ತೋಟಪ್ಪ ಕಾಮನೂರು, ಶಿವಣ್ಣ ಚರಾರಿ, ಪಂಪಣ್ಣ ಪೂಜಾರ್, ಸೋಮಶೇಖರ್ ಹಿಟ್ನಾಳ, ಯಲ್ಲಪ್ಪ ಹಳೇಮನಿ, ಮುಕ್ಕಣ್ಣ ಚಿಲವಾಡಗಿ, ಉಡಚಪ್ಪ ಬೋವಿ, ಮಲ್ಲು ಪೂಜಾರ್, ಪರಶುರಾಮ್ ಕೆರೆಹಳ್ಳಿ, ತಹಶೀಲ್ದಾರ್ ವಿಠ್ಠಲ್ ಚೌಗಲೆ, ತಾಲೂಕ ಪಂಚಾಯತ್ ಇಓ ದುಂದಪ್ಪ ತುರಾದಿ, ನಗರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಅಕ್ಬರ್ ಪಲ್ಟಾನ್, ಅಧಿಕಾರಿಗಳು ಉಪಸ್ಥಿತರಿದ್ದರು.

# ಫಸಲ್ ಬಿಮಾ(ವಿಮಾ) ಯೋಜನೆಯ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ಆಕ್ಷೇಪಣೆ ಸಲ್ಲಿಕೆ

**ಕೊಪ್ಪಳ:**2023-24ನೇಸಾಲಿನಮುಂಗರುಹಂಗಾಮಿನ ಫಸಲ್ ಬಿಮಾ(ವಿಮಾ) ಯೋಜನೆಯಡಿಯಲ್ಲಿ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ರೈತರು ಆಕ್ಷೇಪಣೆ ಸಲ್ಲಿಸುವಂತೆ ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಲ್ಲಿ 2023-24ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯಲ್ಲಿ ಬೆಳೆ ವಿಮೆ ನೊಂದಾಯಿತ ಅರ್ಜಿಯೊಂದಿಗೆ ತಾಳೆಯಾಗದೆ ಇರುವ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ತಾಲ್ಲೂಕು (ಕೃಷಿ/ತೋಟಗಾರಿಕೆ/ಬ್ಯಾಂಕ್) ಮಟ್ಟದ ಅಧಿಕಾರಿಗಳಿಗೆ ಪರಿಶೀಲಿಸಲು ಸಂರಕ್ಷಣೆ ತಂತ್ರಾಂಶದ ಮೂಲಕ ಕಳುಹಿಸಲಾಗಿತ್ತು. ತಾಲ್ಲೂಕು ಮಟ್ಟದ ಅಧಿಕಾರಿಗಳು ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಂಬಂಧಪಟ್ಟ ವಿಮಾ ಸಂಸ್ಥೆಯವರಿಗೆ ವರ್ಗಾಯಿಸಿ, ಅಂತಿಮವಾಗಿ ವಿಮಾ ಸಂಸ್ಥೆಯವರು ಪ್ರಸ್ತಾವನೆಗಳನ್ನು ಒಪ್ಪಿಗೆ ಅಥವಾ ತಿರಸ್ಕೃತ ಮಾಡಿರುತ್ತಾರೆ.

ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡರುವ ಕೊಪ್ಪಳ ತಾಲೂಕಿನ ಪ್ರಸ್ತಾವನೆಗಳ ಕುರಿತು ಪಟ್ಟಿಯನ್ನು ರೈತ ಸಂಪರ್ಕ ಕೇಂದ್ರಗಳಿಗೆ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೂಚಕನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ. ರೈತರು ಫೆಬ್ರವರಿ 27 ರೊಳಗಾಗಿ ತಮ್ಮ ಆಕ್ಷೇಪಣೆಯನ್ನು ರೈತ ಸಂಪರ್ಕ ಕೇಂದ್ರಗಳಿಗೆ, ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪಳ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಿಗೆ ಅಥವಾ ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪಳ, ಇವರಿಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಮಾಡುವ ಕೆಲಸದಲ್ಲಿ ಭಕ್ತಿ ಶ್ರದ್ಧೆ ನಿಷ್ಠೆ ಇರಬೇಕು



**ಬಸವನ ಬಾಗೇವಾಡಿ :** ಪ್ರತಿಯೊಬ್ಬರು ಸಮಾಜಕ್ಕಾಗಿ ಒಳ್ಳೆಯ ಕೆಲಸ ಮಾಡುವುದನ್ನುರೂಢಿಸಿಕೊಳ್ಳಬೇಕು ಕೆಟ್ಟದರ ಬಗ್ಗೆ ಚಿಂತನೆ ಮಾಡಬಾರದು ಎಂದು ಯೋಗ ಗುರು ನಿರಂಜನ ಸ್ವಾಮೀಜಿ ಹೇಳಿದರು

ಪಟ್ಟಣದ ವೀರಭದ್ರೇಶ್ವರ ನಗರದ ಉದ್ಯಾನದಲ್ಲಿ ಬುಧವಾರ ಹಮ್ಮಿಕೊಂಡ ಆಧ್ಯಾತ್ಮಿಕ ಪ್ರವಚನ ಹಾಗೂ ಯೋಗ ಶಿಬಿರ ಸಮಾರೋಪ ಸಮಾರಂಭದಲ್ಲಿ ಅವರ ಮಾತನಾಡಿದರು

ಸಂತರುಮಹಾತ್ಮರುದೇಶಸಮಾಜಕ್ಕಾಗಿಜೀವನವನ್ನು ಮುಡುಪಾಗಿ ಇಟ್ಟಿದ್ದಾರೆ ನಾವು ಸಂಕಲ್ಪ ಮಾಡಿದರೆ ಮನಸ್ಸು ಕೆಲಸ ಮಾಡುತ್ತದೆ ಮಾಡುವ ಕೆಲಸದಲ್ಲಿ ಭಕ್ತಿ ಶ್ರದ್ಧೆ ನಿಷ್ಠೆ ಇರಬೇಕು ಯೋಗ ಪ್ರಾಣಾಯಾಮ ಪುಸ್ತಕ ಓದುವುದನ್ನು ರೂಢಿ ಮಾಡಿಕೊಳ್ಳಬೇಕು. ಸತ್ಸಂಗದಲ್ಲಿ ಪಾಲ್ಗೊಳ್ಳಬೇಕು

ಎಲ್ಲರಿಗೂ ಒಳ್ಳೆಯದನ್ನು ಬಯಸುವ ಭಾವ ಮತ್ತು ಮನಸ್ಸು ಇರಬೇಕು ಮಕ್ಕಳಿ ಉತ್ತಮ ಸಂಸ್ಕಾರದ ನೀಡಬೇಕು ಮಕ್ಕಳನ್ನು ಮೊಬೈಲದಿಂದ ದೂರ ಇಡಬೇಕು ಎಂದು ಹೇಳಿದರು ಶಿಕ್ಷಕಿ ಸುಮಂಗಲ ಕಡಿವಾಳ ಮಾತನಾಡಿ ಪ್ರತಿದಿನ ಬೆಳಿಗ್ಗೆ ಉದ್ಯಾನದಲ್ಲಿ ಯೋಗ ಅಭ್ಯಾಸ ಮುಂದುವರಿಯಲಿದೆ ಎಂದು ಹೇಳಿದರು.

ನಿವೃತ್ತ ಉಪನ್ಯಾಸಕ ಎಲ್ ಎನ್ ಇಟಗಿ ಬಿ ಎಸ್ ಅವಟಿ ಶಿವರುದ್ರಯ್ಯ ಹಿರೇಮಠ ಪ್ರಭಾಕರ ಕೆಡದ ಮಾತನಾಡಿದರು ಚಿಕ್ಕೋಡಿ ವಿನುತ್ ಕಲ್ಲೂರ್ ಶಿವಾನಂದ ತೋಳೂರು ಎಸ್ ಎಸ್ ಜಳಕಿ ಎಚ್ ಎಸ್ ಬಿರಾದಾರ್ ವೀರೇಶ್ ಕುಂಟೋಜಿ ವಿವೇಕಾನಂದ ಕಲ್ಯಾಣ ಶೆಟ್ಟಿ ವಿ ಬಿ ಮರ್ತುರ್ ಕಾಶಿನಾಥ್ ಅವಟಿ ಎಚ್ ಬಿ ಬಾರಿ ಕಾಯಿ ಎಸ್ ಬಿ ನಡಿಕಟ್ಟಿ ಸಿದ್ದನಗೌಡ ಚಿಕ್ಕಕೊಂಡ ಕೊಟ್ರೇಶಿ ಹೆಗಡಾಳ್ ಶರಣು ಬಸ್ತಾಳ್ ಮುಂತಾದವುರಿದ್ದರು.

# ವಿನಾಯಕ ಶಾಲೆಯಲ್ಲಿ ಮಹಾಕವಿ ಸರ್ವಜ್ಞನವರ ಜಯಂತಿ ಆಚರಣೆ



**ತಾಳಿಕೋಟೆ :** ತಾಲೂಕಿನ ಮೈಲೇಶ್ವರದಲ್ಲಿರುವ ಶ್ರೀ ವಿನಾಯಕ ಇಂಟರ್ನಾ?ಯಷನಲ್ ಸ್ಕೂಲ್ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಶ್ರೀ ಸರ್ವಜ್ಞರ ಜಯಂತಿ ಉತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಸಂಗಮೇಶ ದೇಸಾಯಿ(ಸಾಸನೂರು), ಮುಖ್ಯ ಗುರು ಮಾತೆಯರಾದ ಶ್ರೀಮತಿ ನಿರ್ಮಲಾ ದೇಸಾಯಿ, ಮಂಜುನಾಥ ವಿಜಾಪುರ,ಸುನೀತಾಪಾಟೀಲ್,ರೋಷನ ಎಲಿಗಾರ್ , ಶೃತಿ ಮಾಲಗತ್ತಿ, ಮಧು ಮೂಕಿಹಾಳ, ಭಾಗ್ಯ ಗಲಗಲಿ, ಹೀನಾ ರಾಯಚೂರ, ಸುಮಾ ಬಂಟನೂರ, ದೀಪಾ ಬಿದರಕುಂದಿ, ಅಕ್ಷತಾ ಹೂಗಾರ, ಪ್ರಿಯದರ್ಶಿನಿ ಪತ್ತಾರ, ಐಶ್ವರ್ಯ ಗಲಗಲಿ, ಸುಷ್ಮಾ ಬಡಿಗೇರ, ಬಿಬಿಫಾತಿಮಾ ಪಟ್ಟೇವಾಲೆ , ಮೇಘಾ ಚಮಲಾಪುರ, ಗೀತಾ ಸೋಲಾಪುರ, ಅಂಜನಾ ದೇಸಾಯಿ, ಶರಣಮ್ಮ ಗಾರಂಪಳ್ಳಿ, ಬಸವರಾಜ ನಾಲತವಾಡ, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕಣ್ಣಿನ ರಕ್ಷಣೆಗೆ ಆದ್ಯತೆ ನೀಡಿ

## ಹೆಚ್ಚು ಮೊಬೈಲ್ ಬಳಸಬೇಡಿ: ಡಾ. ಚಂದರಗಿ



**ಗುಳೇದಗುಡ್ಡ :** ಕಣ್ಣು ದೇಹದ ಬಹುಮುಖ್ಯ ಅಂಗವಾಗಿದೆ. ಟಿವಿ, ಮೊಬೈಲ್ ಹಾವಳಿಯಿಂದ ಮಕ್ಕಳಲ್ಲಿ ಸಾಕಷ್ಟು ದೋಷಗಳು ಕಂಡು ಬರುತ್ತಿದ್ದು, ಮಕ್ಕಳು ಸೇರಿದಂತೆ ಪ್ರತಿಯೊಬ್ಬರೂ ಅವಶ್ಯಕತೆಗೆ ತಕ್ಕಂತೆ ಮೊಬೈಲ್ ಬಳಕೆ ಮಾಡಬೇಕು. ಓದಿನ ಕಡೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಡಾ.ಲಿಂಗರಾಜ ಚಂದರಗಿ ಹೇಳಿದರು.

ಅವರು ಸಮೀಪದ ಕೆಲವಡಿ ಹಾಗೂ ತಿಮ್ಮಸಾಗರ ಗ್ರಾಮದಲ್ಲಿ ಸೇವಾ ಭಾರತಿ ಗುಳೇದಗುಡ್ಡ, ಲಯನ್ಸ್ ಕ್ಲಬ್ ಬಾಗಲಕೋಟೆ, ಅರುಣೋದಯ ಪ್ಯಾರಾ ಮೆಡಿಕಲ್ ಕಾಲೇಜು ನವನಗರ,

ಮತ್ತು ಆರೋಗ್ಯ ಹಾಗೂ ಕಲ್ಯಾಣ ಇಲಾಖೆ ಬಾಗಲಕೋಟೆ ಸಹಕಾರದೊಂದಿಗೆ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಕಣ್ಣು ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿ, ಶಿಕ್ಷಣದಿಂದ ಮಾತ್ರ ವ್ಯಕ್ತಿ ಭವಿಷ್ಯ ನಿರ್ಮಾಣವಾಗುತ್ತದೆ. ಮೊಬೈಲ್ ಬಳಕೆಯಿಂದ ಕಣ್ಣಿನ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತದೆ ಎಂದರು.


ಸುಮಾರು 229 ಮಕ್ಕಳ ಕಣ್ಣು ತಪಾಸಣೆ ನಡೆಸಲಾಯಿತು. ಅದರಲ್ಲಿ 20 ಜನ ಮಕ್ಕಳಿಗೆ ಕಣ್ಣಿನ ದೋಷ ಇದ್ದು ಅವರಿಗೆ ವಿಶೇಷ ಚಿಕಿತ್ಸೆ ನೀಡಲು ಸೂಚಿಸಲಾಗಿದೆ. ಕಾರ್ಯಕ್ರಮದಲ್ಲಿ ಸೇವಾ ಭಾರತಿ ಅಧ್ಯಕ್ಷ ಸಂಜೀವ ಕಾರಕೂನ್, ವಿವೇಕಾನಂದ ದೇವಾಗಂಠ, ಸಂಗಮೇಶ ಹುನಗುಂದ, ಪೊಲಿಸಪ್ಪ ರಾಮದುರ್ಗ, ಶಿವಾನಂದ ಜವಳಿ, ಮಲ್ಲಿಕಾರ್ಜುನ ಶೀಲವಂತ, ಅರುಣೋದಯ ಪ್ಯಾರಾಮೆಡಿಕಲ್ ಕಾಲೇಜು ಪ್ರಾಚಾರ್ಯ ಡಾ.ಗಣಾಚಾರಿ, ಡಾ.ಮಹಾಂತೇಶ ಕಾಜಗಾರ, ಸರ್ಕಾರಿ ಕಟಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಹಾಗೂ ಶಾಲಾ ಸಿಬ್ಬಂದಿ ಇದ್ದರು.

## ಕನ್ನಡ ಸಾಹಿತ್ಯ ಲೋಕದಲ್ಲೊಂದು ಹೊಸ ವಿಕ್ರಮ: ಮಹಾ ಕುಂಭಮೇಳದಲ್ಲಿ ಮೊಳಗಿದ ಕನ್ನಡ ಕಹಳೆ

## ಮಣ್ಣೆ ಮೋಹನ್ ವಿರಚಿತ "ಕುಂಭಮೇಳ: ಜಗತ್ತಿನ ಸಾಂಸ್ಕೃತಿಕ ಹಬ್ಬ" ಲೋಕಾರ್ಪಣೆ: ನಾಗ ಸಾಧುಗಳ ಸಾಥ್

# ಮಹಾ ಕುಂಭಮೇಳದಲ್ಲಿ ಕನ್ನಡ ಪುಸ್ತಕ ಬಿಡುಗಡೆಯಾವುದರ ಮೂಲಕ ಕನ್ನಡದ ಕೀರ್ತಿ ಪತಾಕೆ ಮುಗಿಲೆತ್ತರಕ್ಕೆ ವಿಸ್ತರಣೆ: ಲೇಖಕ, ಅಂಕಣಕಾರ ಮಣ್ಣೆ ಮೋಹನ್






**ಮಹಾ ಕುಂಭಮೇಳದಿಂದ ನೇರ ವರದಿ:** ಅದೊಂದು ಆವಿಸ್ಮರಣೀಯ ಕ್ಷಣ. ದಕ್ಷಿಣ ಭಾರತದ ಕರ್ನಾಟಕದಿಂದ ಹೊರಟ ಕನ್ನಡ ಮನಸುಗಳ ತಂಡ, ಉತ್ತರ ಭಾರತದ, ಉತ್ತರ ಪ್ರದೇಶದ, ಪ್ರಯಾಗರಾಜ್ ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ, ನಾಗಸಾಧುಗಳ ಸಾನಿಧ್ಯದಲ್ಲಿ, ಕನ್ನಡ ಪುಸ್ತಕವೊಂದನ್ನು ಲೋಕಾರ್ಪಣೆಗೊಳಿಸಿದ ಸುಮಧುರ ಕ್ಷಣ. ಈಗಾಗಲೇಕುಪ್ಪಳ್ಳಿ,ಹಂಪಿ,ಕಾಶಿ,ಅಯೋಧ್ಯೆ, ಗಯಾ, ಚಿತ್ರಕೂಟ, ಪ್ರಯಾಗ್ರಾಜ್, ಕನ್ಯಾಕುಮಾರಿ, ರಾಮೇಶ್ವರ, ಶಬರಿಮಲೆ ಗಳಲ್ಲದೆ ನೇಪಾಳದಲ್ಲಿಯೂ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದ್ದ ಜ್ಞಾನ ಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗ, ಇದೀಗ ಮಹಾ ಕುಂಭಮೇಳದಲ್ಲಿಯೂ ಪುಸ್ತಕ ಬಿಡುಗಡೆ ಮಾಡುವ ಮೂಲಕ ಕನ್ನಡದ ಕೀರ್ತಿ ಪತಾಕೆಯನ್ನು ಮುಗಿಲೆತ್ತರಕ್ಕೆ ವಿಸ್ತರಿಸಿದ ಭಾಜನಕ್ಕೆ ಪಾತ್ರವಾಯಿತು.

144 ವರ್ಷಗಳ ನಂತರ ನಡೆಯುತ್ತಿರುವ, ಇಲ್ಲಿಯವರೆಗೂ ಸುಮಾರು 55 ಕೋಟಿ ಜನರು ಅಮೃತಸ್ನಾನ ಮಾಡಿರುವ, ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯ, ಪವಿತ್ರ ಮಹಾ ಕುಂಭಮೇಳದಲ್ಲಿ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ತಮ್ಮ "ಕುಂಭಮೇಳ:ಜಗತ್ತಿನಸಾಂಸ್ಕೃತಿಕಹಬ್ಬ'ಕೃತಿ ಅನಾವರಣಗೊಂಡ ನಂತರ ಮಾತನಾಡಿದ ಕೃತಿಯ ಕರ್ತೃ ಮಣ್ಣೆ ಮೋಹನ್ ಅವರು 'ಮಹಾ ಕುಂಭಮೇಳದಂತಹ ಜಗತ್ತಿನ ಸಾಂಸ್ಕೃತಿಕ ಮಹಾಮೇಳದಲ್ಲಿ ನನ್ನ ಪುಸ್ತಕವೊಂದನ್ನು ಬಿಡುಗಡೆಗೊಳಿಸುವ ಸುಕೃತಕ್ಕೆ ಭಾಜನನಾಗಿದ್ದೇನೆ ಎಂಬುದು ನನ್ನ ಜೀವನದ ಹೆಮ್ಮೆಯ ವಿಷಯಗಳಲ್ಲೊಂದಾಗಿದೆ. ಬಹುಶಃ ಏಳು ಕೋಟಿ ಕನ್ನಡಿಗರಲ್ಲಿ ಯಾರಿಗೂ ದೊರಕದ ಭಾಗ್ಯ ನನಗೆ ದೊರೆತಿದೆ ಎಂದು ನಾನು ವಿನಮ್ರವಾಗಿ ಹೇಳಬಯಸುತ್ತೇನೆ. ಇದರ ಸಂಪೂರ್ಣ ಶ್ರೇಯಸ್ಸು ಸಮಸ್ತ ಕನ್ನಡಿಗರಿಗೆ ಸೇರುವಂತದ್ದು' ಎಂದರು.

ಮುಂದುವರೆದ ಮಾತನಾಡಿದ ಅವರು 'ಅಂದು ಕನ್ನಡ ರಾಜವಂಶಗಳು ದಂಡಯಾತ್ರೆಯನ್ನು ಕೈಗೊಂಡು, ಉತ್ತರ ಭಾರತದ ಅನೇಕ ಪ್ರದೇಶಗಳನ್ನು ಗೆದ್ದು, ದಿಗ್ವಿಜಯ ಸಾಧಿಸಿ, ತಮ್ಮ ಗಡಿಗಳನ್ನು ವಿಸ್ತರಿಸಿದಂತೆಯೇ,ಕನ್ನಡಿಗರಾದ ನಾವುಗಳು ಇಂದು ಸಾಹಿತ್ಯ, ಕಲೆ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ನೃತ್ಯ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ದಂಡಯಾತ್ರೆಯನ್ನು ಕೈಗೊಳ್ಳಬೇಕಾಗಿದೆ, ಆ ನಿಟ್ಟಿನಲ್ಲಿ ನಮ್ಮದೊಂದು ಸಣ್ಣ ಪ್ರಯತ್ನ ಇದಾಗಿದೆ. ಈ ಶ್ರೇಯ ಏಳು ಕೋಟಿ ಕನ್ನಡಿಗರಿಗೆ ಅರ್ಪಿತವಾದದ್ದು. ಮುಂದಿನ ದಿನಗಳಲ್ಲಿ ಅನೇಕ ಸಂಶೋಧನಾ ಕೃತಿಗಳನ್ನು ಹೊರತಂದು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಲಾಗುವುದು" ಎಂದು ತಿಳಿಸಿದರು.

ಯೋಗೇಂದ್ರ ಟ್ರಾವೆಲ್ಸ್ ವತಿಯಿಂದ ಆಯೋಜಿಸಲಾಗಿದ್ದ ಕುಂಭಮೇಳ ಯಾತ್ರೆಯಲ್ಲಿ, ಭಾಗವಹಿಸಿದ್ದ 80ಕ್ಕೂ ಹೆಚ್ಚು ಯಾತ್ರಿಕರನ್ನೊಳಗೊಂಡ ಕರ್ನಾಟಕದ ತಂಡ ಕಾರ್ಯಕ್ರಮದಲ್ಲಿ ಉಪಸ್ಥಿತವಿತ್ತು.

# ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಸುಭದ್ರ ಕೃಷಿ ಭಾರತ ನಿರ್ಮಿಸಿ: ಡಾ. ಆರ್.ಎಂ. ಕಮ್ಮೂರ




**ವಿಜಯಪುರ :** ಇಂದು ಕೃಷಿಯಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು, ರೈತರಿಗೆ ಆದಾಯ ದ್ವಿಗುಣಗೊಳಿಸಿಕೊಳ್ಳಲು ವಿದ್ಯಾರ್ಥಿಗಳು ಸದಾ ಸನ್ನದ್ಧರಾಗಿರಬೇಕೆಂದು ನಬಾರ್ಡ್ ನ ನಿವೃತ್ತ ಮಹಾಪ್ರಬಂಧಕ ಡಾ. ಆರ್ ಎಂ ಕಮ್ಮೂರ ಹೇಳಿದರು.
ಗುರುವಾರ ನಗರ ಹೊರವಲಯದ ಹಿಟ್ನಳ್ಳಿ ಕೃಷಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡ ಇಂದಿನ ಭಾರತದಲ್ಲಿ ಕೃಷಿ ಹಾಗೂ ಕೃಷಿ ವಿದ್ಯಾರ್ಥಿಗಳಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿರುವ ಅವಕಾಶಗಳು ಕುರಿತ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು.
ಭಾರತವು ತನ್ನ ಕೃಷಿ ಕ್ಷೇತ್ರವನ್ನು ಆಧುನಿಕರಿಸುವಲ್ಲಿ ಗಮನಾರ್ಹ ದಾಪುಗಾಲು ಹಾಕಿದೆ. ಕೃಷಿ ಉತ್ಪಾದಕತೆ ಮತ್ತು ಸುಸ್ಥಿರತೆಯನ್ನು ಹೆಚ್ಚಿಸಲು ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ. ರೈತರು ಸುಸ್ಥಿರ ಪದ್ಧತಿಗಳು ಮತ್ತು ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುತ್ತಿದೆ ಎಂದರು.
ಸಣ್ಣ ಭೂ ಹಿಡುವಳಿಗಳು ಸೀಮಿತ ಭೂಮಿಯಿಂದಾಗಿ, ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಅನೇಕ ರೈತರು ಸವಾಲುಗಳನ್ನು ಎದುರಿಸುತ್ತಿದ್ದಾರೆ, ಕೃಷಿಯಲ್ಲಿ ನವೀನ ತಂತ್ರಜ್ಞಾನ ಅಳವಡಿಕೆ, ನಿಖರ ಕೃಷಿ ತಂತ್ರಗಳು ಮತ್ತು ತಂತ್ರಜ್ಞಾನ ಹೆಚ್ಚಿಸುವುದು, ಸಾಂಪ್ರದಾಯಿಕ ಬೆಳೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಬೆಳೆ ವೈವಿಧ್ಯೀಕರಣ ಅಳವಡಿಸಿಕೊಳ್ಳುವತ್ತ ಮುಂದೆ ಸಾಗಬೇಕಾಗಿದೆ. ರೈತರು ಬೆಳೆದ ಬೆಳೆಗೆ ಯೋಗ್ಯ ಮಾರುಕಟ್ಟೆಯನ್ನು ಒದಗಿಸಬೇಕಾಗಿರುವುದು ಇಂದಿನ ಅಗತ್ಯತೆಯಾಗಿದೆ. ಇದಕ್ಕಾಗಿ ರೈತ ಉತ್ಪಾದಕ ಸಂಸ್ಥೆಗಳನ್ನು ಬಲಪಡಿಸಬೇಕಾಗಿದೆ ಎಂದು ಕಿವಿ ಮಾತು ಹೇಳಿದರು. ಅತಿಥಿಗಳಾದ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಪ್ರಧಾನ ವ್ಯವಸ್ಥಾಪಕ ಜೆ.ಸಿ. ಮಾಟೊಳ್ಳಿ ಮಾತನಾಡಿ, ಕೃಷಿ ವಿದ್ಯಾರ್ಥಿಗಳಿಗೆ ವಿವಿಧ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಹೆಚ್ಚಿನ ಅವಕಾಶಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಕೂಡ ತಯಾರಾಗಲು ಈಗಿನಿಂದಲೇ ಪ್ರಯತ್ನಿಸಬೇಕೆಂದರು.
ಇನ್ನೋರ್ವ ಅತಿಥಿ ಡಾ. ಅಶೋಕ ಕುಲಕರ್ಣಿ ಮಾತನಾಡಿ, ನವ ಭಾರತದ, ನಿರ್ಮಾತೃಗಳಾದ, ನವ ಚೈತನ್ಯವುಳ್ಳ, ಕೃಷಿ ನವೋದ್ಯಮ ಬೆಳವಣಿಗೆಗೆ ಅನುಕೂಲವಾಗುವಂತೆ ಕೃಷಿ ವಿದ್ಯಾರ್ಥಿಗಳು ಓದಿನ ಜೊತೆಗೆ, ಕೌಶಲ್ಯವನ್ನು ಅಳವಡಿಸಿಕೊಳ್ಳಬೇಕೆಂದರು.
ಪ್ರಭಾರ ಡೀನ್ ಡಾ. ಎಂ ಎಂ ಜಮಾದಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.
ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ, ಸಹ ಸಂಶೋಧನಾ ನಿರ್ದೇಶಕ ಡಾ. ಎಸ್.ಬಿ ಜಗ್ಗಿನವರ, ಡಾ. ಎನ್.ಡಿ. ಸುನಿತಾ, ಡಾ. ಎಸ್.ಜಿ. ಅಸ್ಕಿ, ಡಾ. ಮಿಲಿಂದ್ ಪೋತದಾರ, ವಿದ್ಯಾರ್ಥಿ ಸಂಘದ ಅಧ್ಯಕ್ಷ ವೀರೇಶ ಹವಾಲ್ದಾರ್, ಕಿಶೋರ ಹೆಗಡೆ, ಶಿವರಾಜ ಮೇಟಿ, ಅರುಣ, ಅಮೂಲ್ಯ, ಸೃಷ್ಟಿ, ಸೇರಿದಂತೆ ಮಹಾವಿದ್ಯಾಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಶಿಕ್ಷಕರು, ಸಿಬ್ಬಂದಿಗಳು ಭಾಗವಹಿಸಿದ್ದರು.

# ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಲವಾರು ಸಮಾಜ ಮುಖಿ ಕಾರ್ಯಗಳಾಗಿವೆ: ಯೋಜನಾಧಿಕಾರಿ ಶೇಖರನಾಯ್ಕ ಹೇಳಿಕೆ

**ಕೊಪ್ಪಳ :** ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಕುಷ್ಟಗಿ.: ಪರಮಪೂಜ್ಯ ವಿರೇಂದ್ರಹೆಗಡೆ ಹಾಗೂ ಹೇಮಾವತಿ ಹೆಗಡೆಯವರು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಲವಾರು ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಶೇಖರನಾಯ್ಕ ಹೇಳಿದರು.
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕುಷ್ಟಗಿ ಶಾಖೆ ಹಾಗೂ ಡಾ.ಎಂ.ಎಂ ಜೋಷಿ ನೇತ್ರ ವಿಜ್ಞಾನ ಸಂಸ್ಥೆ ಹುಬ್ಬಳ್ಳಿ, ವಿನಾಯಕ ನೇತ್ರ ಸೇವಾ ಸಂಸ್ಥೆ ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಬುಧವಾರ ಬೆಳಿಗ್ಗೆ ಇಲ್ಲಿನ ಶ್ರೀ ಬುತ್ತಿಬಸವೇಶ್ವರ ಸಭಾ ಭವನದಲ್ಲಿ ಏರ್ಪಡಿಸಿದ್ದ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆ ಶಿಬಿರವನ್ನು ಕೆರೆ ಅಭಿವೃದ್ಧಿ, ಬಡಜನರಿಗೆ ವಾತ್ಸಲ ಯೋಜನಯಡಿಯಲ್ಲಿ ಉಚಿತವಾಗಿ ಮನೆ ನಿರ್ಮಾಣ, ಎಸ್.ಎಸ್.ಎಲ್.ಸಿ



ವಿದ್ಯಾರ್ಥಿಗಳಿಗೆ ಸಹಾಯಧನ, ನಿರ್ಗತಿಕ ಹಿರಿಯ ನಾಗರಿಕರಿಗೆ ಮಾಶಾಸನ ಸೇರಿದಂತೆ ಅನೇಕ ಯೋಜನೆಗಳ ಮೂಲಕ ಬಡಜನರಿಗೆ ಸಹಾಯ ಮಾಡಿದ್ದಾರೆ.
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸಾಲ ನೀಡುವ ಸಂಸ್ಥೆಯಲ್ಲ ವಿವಿಧ ಬ್ಯಾಂಕ್ ಗಳ ಸಹಭಾಗಿತ್ವದಲ್ಲಿ ಸದಸ್ಯರ ಉಳಿತಾಯ ಖಾತೆ ತೆರೆದು ಸಾಲ ಸೌಲಭ್ಯ ಒದಗಿಸಿ ಉದ್ಯಮಗಳ ಮೂಲಕ ಮಹಿಳೆಯರು ಸ್ವಾಲಂಬಿ ಜೀವನ ನಡೆಸಲು ಗ್ರಾಮಾಭಿವೃದ್ಧಿ ಯೋಜನೆ ಆರಂಭಿಸಿದ್ದಾರೆ ಎಂದು ಹೇಳಿದರು.
ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು ಆರೋಗ್ಯ ಕಾರ್ಡ್ ಪಡೆಯುವ ಮೂಲಕ ಉತ್ತಮ ಆರೋಗ್ಯ ಹೊಂದಬೇಕು ಎಂದು ಸಲಹೆ ನೀಡಿದರು. ವಿನಾಯಕ ನೇತ್ರ ಸೇವಾ ಸಂಸ್ಥೆ ಅಧ್ಯಕ್ಷ ಬಸವರಾಜ ಪಲ್ಲೇದ, ವಕೀಲ ಚಂದ್ರಶೇಖರ ಉಪ್ಪಿನ ಮಾತನಾಡಿದರು.
ಈ ಸಂದರ್ಭದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕ ಪ್ರಕಾಶರಾವ್, ಒಕ್ಕೂಟದ ಅಧ್ಯಕ್ಷರಾದ, ಹಂಪಮ್ಮ ಕೋಳೂರು, ಶಿಲ್ಪಾ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮನ್ವಯಾಧಿಕಾರಿ ಶಿವಲೀಲಾ ಬೆಳ್ಳೇರಿಮಠ ಹಾಗೂ ಕಾರ್ಯದರ್ಶಿ ಪ್ರಭು ಜಾಗೀರದಾರ, ನೇತ್ರಾಧಿಕಾರಿ ಮನೋಹರ ಪತ್ತಾರ, ಕಾವೇರಿ, ಬಸಯ್ಯ ಹಿರೇಮಠ, ವಲಯದ ಮೇಲ್ವಿಚಾರಕಿ ಮಂಜುಳಾ, ಟಿ.ಎನ್.ಓ ರಾಘವೇಂದ್ರ, ಸೇವಾ ಪ್ರತಿನಿಧಿಗಳಾದ ಕಳಕಮ್ಮ, ಶಿವಶರಣಮ್ಮ, ಒಕ್ಕೂಟದ ಪದಾಧಿಕಾರಿಗಳು ಹಾಗೂ ಜ್ಞಾನ ವಿಕಾಸ ಹಾಗೂ ಎಲ್ಲಾ ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.
ಶರಣಪ್ಪ ಲೈನದ್ ಸ್ವಾಗತಿಸಿದರು.
ಶಿವಲೀಲಾ ಬೆಳ್ಳೇರಿಮಠ ವಂದಿಸಿದರು.
ಶಿಬಿರದಲ್ಲಿ ಸುಮಾರು 112 ಜನರ ಕಣ್ಣುಗಳನ್ನು ತಪಾಸಣೆ ಮಾಡಿದರು. 20 ಜನರು ಕಣ್ಣಿನ ಪೊರೆ ಹೊಂದಿರುವ ಫಲಾನುಭವಿಗಳು ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದರು.

# ಹಕ್ಕುಪತ್ರ ನೀಡಲು ರಾಜೀವ್ ಗಾಂಧಿ ನಗರದ ನಿವಾಸಿಗಳಿಂದ ಪಾದಯಾತ್ರೆ: ಚಿತ್ರನಟ ಚೇತನ್ ಕುಮಾರ್ ಸಾತ್






**ಬಳ್ಳಾರಿ :** ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ ಸಂಖ್ಯೆ 34ರ ರಾಜೀವ್ ಗಾಂಧಿ ನಗರದ ನಿವಾಸಿಗಳು 60 ವರ್ಷಗಳಿಂದ ಪ್ರದೇಶದಲ್ಲಿ ವಾಸವಾಗಿದ್ದು ಹಕ್ಕು ಪತ್ರಕ್ಕಾಗಿ ಸಾಕಷ್ಟು ಬಾರಿ ಮನವಿ ಸಲ್ಲಿಸಿದರು ಯಾವೊಬ್ಬ ಅಧಿಕಾರಿಗಳು ಮತ್ತು ರಾಜಕಾರಣಿಗಳು ಇಚ್ಛಾ ಶಕ್ತಿ ತೋರದೇ ಇರುವುದರಿಂದ ಇಲ್ಲಿನ ನಿವಾಸಿಗಳು ಆಭದ್ರತೆಯಲ್ಲಿ ಬದುಕಬೇಕಾದ ಅನಿವಾರ್ಯತೆ ಇದೆ ಕಾರಣ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಮತ್ತು ರಾಜಕಾರಣಿಗಳು ಈ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಬೇಕೆಂದು ಕಟ್ಟೆ ಸ್ವಾಮಿ ಒತ್ತಾಯಿಸಿದ್ದಾರೆ.
ಅವರು ಇಂದು ರಾಜೀವ್ ಗಾಂಧಿನಗರದಿಂದ ನೂರಾರು ಜನರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯವರಿಗೆ ಪಾದಯಾತ್ರೆಯ ಮೂಲಕ ಆಗಮಿಸಿ ಜಿಲ್ಲಾಧಿಕಾರಿಗಳ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನೆ ಪತ್ರವನ್ನು ನೀಡಿ ಮಾತನಾಡಿ, ಈ ಪ್ರದೇಶದಲ್ಲಿ ವಾಸಿಸುವ ಜನರಿಗೆ ಬೇರೆ ಯಾವುದೇ ಮನೆಗಳಿರುವುದಿಲ್ಲ ಈ ಮನೆಗಳಲ್ಲಿ ಇವರ ಜೀವನ ಅಡಗಿದೆ ಕಾರಣ ಇವರಿಗೆ ಸರ್ಕಾರದಿಂದ ಹಕ್ಕು ಪತ್ರಗಳನ್ನು ನೀಡಿ ಜೀವನಕ್ಕೆ ಭದ್ರತೆಯನ್ನು ಕಲ್ಪಿಸಿ ಕೊಡಬೇಕೆಂದು ಚೋಟ ಖಾನ್ ಕರಾಟೆ ಸಂಸ್ಥೆಯ ಕಟ್ಟಿ ಸ್ವಾಮಿ ಸರ್ಕಾರವನ್ನು ಆಗ್ರಹಿಸಿದರು.
ಸಂದರ್ಭದಲ್ಲಿ ಚಿತ್ರ ನಟ ಹಾಗೂ ದಲಿತ ಸಮುದಾಯ ಸಮ ಸಮಾಜದ ಹೋರಾಟಗಾರರಾದ ಅಹಿಂದ ಚೇತನ್ ಬೆಂಗಳೂರು ಇವರು ಭಾಗವಹಿಸಿ ಪ್ರತಿಭಟನಾ ನಿರತರಿಗೆ ಬೆಂಬಲ ಸೂಚಿಸಿ ಮಾತನಾಡಿ, ಸರ್ಕಾರ ಬಡವರ ಜೀವನ ಜೊತೆ ಆಟವಾಡದೇ ಕೂಡಲೇ ಅಪ ಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.
ಈ ಸಂದರ್ಭದಲ್ಲಿ ಹಿರಿಯ ಹೋರಾಟಗಾರ ಪನ್ನರಾಜ್ ಮತ್ತು ಕರ್ನಾಟಕ ಏಕೀಕರಣ ಸಮಿತಿಯ ರಾಜ್ಯಾಧ್ಯಕ್ಷ ಪಿ ಶೇಖರ್, ದಲಿತ ಸಂಘರ್ಷ ಸಮಿತಿಯ ಎನ್ ಮೂರ್ತಿ ಬಣದ ಜಿಲ್ಲಾಧ್ಯಕ್ಷ ಶ್ರೀನಿವಾಸ ಭಂಡಾರಿ ಹಾಗೂ ದಲಿತ ಸೇನೆಯ ಮುರಳಿ ಕೃಷ್ಣ ಮಾನಪ್ಪ ರತ್ನಯ್ಯ ಕರ್ನಾಟಕ ರಕ್ಷಣಾ ವೇದಿಕೆಯ ಹನುಮೇಶ್ ಮತ್ತು ವಿವಿಧ ಸಂಘಟನೆಗಳ ಜಿಲ್ಲಾಧ್ಯಕ್ಷರುಗಳು ಪದಾಧಿಕಾರಿಗಳು ಮತ್ತು ರಾಜೀವ್ ಗಾಂಧಿ ನಿವಾಸಿ ನಾರಾಯಣ ಕಟ್ಟಿ ಸ್ವಾಮಿ ವೆಂಕಟೇಶ್, ರಘು, ಶ್ರೀನಿವಾಸ್, ಎರಿಸ್ವಾಮಿ, ತುಕಾರಾಂ ಮತ್ತು ರಾಜೀವ್ ಗಾಂಧಿ ನಿವಾಸಿಗಳು ಉಪಸ್ಥಿತರಿದ್ದರು.

# ಅಂತರ ವಿವಿ ವುಶು ಕ್ರೀಡಾಕೂಟಕ್ಕೆ ಮಹಿಳಾ ವಿವಿ ಕ್ರೀಡಾಪಟುಗಳ ಆಯ್ಕೆ

**ವಿಜಯಪುರ :** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 2024–25ನೇ ಸಾಲಿನ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯದ ಕ್ರೀಡೆಗೆ ಮಹಿಳಾ ವಿವಿಯ ವುಶು ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ.
ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ವುಶು ಕ್ರೀಡೆಯು ಫೆ. 22 ರಿಂದ 27 ರವರೆಗೆ ಚಂಡೀಗಢ ವಿಶ್ವವಿದ್ಯಾಲಯದಲ್ಲಿ ಜರುಗಲಿದ್ದು, ಈ ಕ್ರೀಡಾಕೂಟದಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವುಶು ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ತಂಡದ ತರಬೇತಿದಾರಾಗಿ ಅನಿತಾ ಚವ್ಹಾಣ ಮತ್ತು ವ್ಯವಸ್ಥಾಪಕರಾಗಿ ಜಬಿನತಾಜ ಜಿಗಳೂರ ಭಾಗವಹಿಸಲಿದ್ದಾರೆ ಎಂದು ವಿವಿ ಪ್ರಕಟಣೆ ತಿಳಿಸಿದೆ. ಆಯ್ಕೆಯಾಗಿರುವ ಕ್ರೀಡಾಪಟುಗಳ ತಂಡಕ್ಕೆ ವಿವಿಯ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಂ. ಚಂದ್ರಶೇಖರ, ಕ್ರೀಡಾ ನಿರ್ದೇಶನಾಲಯದ ನಿರ್ದೇಶಕ ಡಾ. ಹನುಮಂತಯ್ಯ ಪೂಜಾರ, ಸಹ ನಿರ್ದೇಶಕ ವಿಶ್ವನಾಥ ನಡಕಟ್ಟಿ ಮತ್ತು ಕ್ರೀಡಾ ವಿಭಾಗದ ಮುಖ್ಯಸ್ಥ ಪ್ರೊ. ಸಕ್ಪಾಲ್ ಹೂವಣ್ಣ ಶುಭ ಹಾರೈಸಿದ್ದಾರೆ.

# ಭಾಗವ್ವ ಹಾಲಪ್ಪ ವಡೇರ ನಿಧನ



**ಗೋಕಾಕ :** ತಾಲೂಕಿನ ಬೆಟಗೇರಿ ಗ್ರಾಮದ ನಿವಾಸಿ, ಸ್ಥಳೀಯ ವಡೇರ ಸಮುದಾಯದ ಹಿರಿಯರಾದ ಶ್ರೀಮತಿ ಭಾಗವ್ವ ಹಾಲಪ್ಪ ವಡೇರ ತಮ್ಮ 66 ನೆಯ ವಯಸ್ಸಿನಲ್ಲಿ ಫೆಬ್ರುವರಿ 20 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಇಬ್ಬರು ಪುತ್ರರು, ನಾಲ್ಕು ಜನ ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

# ಶಿವಕುಮಾರ ಜಿ. ಉಮದಿ ನಿಧನ




**ಬೆಂಗಳೂರು :** ಮೂಲತಃ ರಬಕವಿಯ ರಹವಾಸಿಯಾಗಿದ್ದ ಬಣಗಾರ ಸಮಾಜದ ಹಿರಿಯರಾಗಿದ್ದ (ನಾಗಲಿಕ) ಶಿವಕುಮಾರ ಗುರುಲಿಂಗಪ್ಪ ಉಮದಿ ಅವರು (ಜಮಖಂಡಿಯ ಎಸ್.ಬಿ.ಐ.ನಲ್ಲಿ ಅಧಿಕಾರಿಯಾಗಿದ್ದ ಬಾಬು ಜಿ.ಉಮದಿ ಅವರ ಸಹೋದರ) ತಮ್ಮ 69 ನೆಯ ವಯಸ್ಸಿನಲ್ಲಿ ಫೆ.19 ರಂದು ನಿಧನರಾದರು. ಮೃತರು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಮೃತರು ತಮ್ಮ ಹಿಂದೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಢಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ಮಾ.9 ರಂದು ರಾಜ್ಯ ಕಾನಿಪ ಸರ್ವ ಸದಸ್ಯರ ಮಹಾಸಭೆ

**ಬಾಗಲಕೋಟೆ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2023–24ನೇ ಸಾಲಿನ 91ನೇ ಸರ್ವ ಸದಸ್ಯರ ಮಹಾಸಭೆಯನ್ನು ಈ ಬಾರಿ ಕೊಪ್ಪಳದಲ್ಲಿ ಜರುಗಲಿದ್ದು, ಜಿಲ್ಲೆಯ ಕಾ.ನಿ.ಪ. ಸದಸ್ಯರು ಭಾಗಿಯಾಗಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ ಧಲಬಂಜನ ಹಾಗೂ ಪ್ರಧಾನ ಕಾರ್ಯದರ್ಶಿ ಶಂಕರ ಎಸ್. ಕಲ್ಯಾಣಿ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.
2023–24ನೇ ಸಾಲಿನ 91ನೇಯ ಸರ್ವ ಸದಸ್ಯರ ಮಹಾಸಭೆಯು ಮಾ.9 ರಂದು ಭಾನುವಾರ ಬೆಳಗ್ಗೆ 11 ಗಂಟೆಗೆ ಕೊಪ್ಪಳದ ಟೌನ್ ಪಾನಘಂಟಿ ಕಲ್ಯಾಣ ಮಂಟಪ, ಭಾಗ್ಯನಗರ ರಸ್ತೆ ಕೇಂದ್ರ ಬಸ್ ನಿಲ್ದಾಣದ ಹತ್ತಿರ ಕೊಪ್ಪಳದಲ್ಲಿ ನಡೆಸಲು ಇತ್ತೀಚೆಗೆ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಿದಂತೆ ನಡೆಸಲಾಗುತ್ತಿದೆ.
ಸರ್ವ ಸದಸ್ಯರ ಮಹಾಸಭೆಯಲ್ಲಿ ಸದಸ್ಯರು ಯಾವುದೇ ವಿಷಯ ಪ್ರಸ್ತಾಪ ಮಾಡಲು ಇಚ್ಛಿಸುವವರು ದಿನಾಂಕ: 28/02/25ರ ಒಳಗೆ ನೀವು ಕೇಳುವ ವಿಷಯಗಳನ್ನ ಲಿಖಿತ ರೂಪದಲ್ಲಿ ಕೇಂದ್ರ ಸಂಘಕ್ಕೆ ಕಳಿಸಿಕೊಡಬೇಕು ಹಾಗೂ ಉಳಿದು ಕೊಳ್ಳಲು ವಸತಿ ವ್ಯವಸ್ಥೆಗಾಗಿ ಕೊಪ್ಪಳ ಜಿಲ್ಲೆಯ ಜಿಲ್ಲಾಧ್ಯಕ್ಷ ಹನುಮಂತ ಹಳ್ಳಿಕೇರಿ, 9008067007, ವೈ.ನಾಗರಾಜು ಜಿಲ್ಲಾ ಪ್ರಧಾನ ಕಾರ್ಯದರ್ಶಿ– 8095402520, ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯರಾದ ಸಾಧಿಕ್ ಹಾಲಿ–9449154028, ರಾಜ್ಯಕಾರ್ಯಕಾರಣಿಸದಸ್ಯರಾದ ಎಚ್.ಎಸ್.ಹರೀಶ್–9900617582, 8310331426 ಹೆಚ್ಚಿನ ಮಾಹಿತಿಗಾಗಿ ಇವರನ್ನು ಸಂಪರ್ಕಿಸಬಹುದೆಂದು ತಿಳಿಸಿದ್ದಾರೆ.

# ಬೂಕನಕೆರೆಗೆ ಮತ್ತೆ ಗವಿಮಠಕ್ಕೆ ಭೇಟಿ ನೀಡಿದ ಬಿ.ಎಸ್.ಯಡಿಯೂರಪ್ಪ




**ಕೆ ಆರ್ ಪೇಟೆ :** ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರನ್ನು ಶಿವಮೊಗ್ಗ ಜಿಲ್ಲೆಯವರು, ಶಿಕಾರಿಪುರದಲ್ಲಿ ಹುಟ್ಟಿದವರು ಅಂತಲೇ ಬಹಳಷ್ಟು ಜನ ಅಂದುಕೊಂಡಿದ್ದಾರೆ. ಅದರೆ ಆವರು ಮಂಡ್ಯ ಜಿಲ್ಲೆ ಕೆಆರ್ ಪೇಟೆ ತಾಲ್ಲೂಕಿನ ಬೂಕನಕೆರೆಯವರು. ಅವರ ಪೂರ್ತಿ ಹೆಸರು ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ. ಸ್ವಂತ ಊರಲ್ಲಿ ಯಡಿಯೂರಪ್ಪ ಶ್ರೀ ಕೈವಲೇಶ್ವರ ದೇವಸ್ಥಾನ ಕಟ್ಟಿಸುತ್ತಿದ್ದಾರೆ ಮತ್ತು ಇದರ ಜೊತೆಗೆ ಕಾಪನಹಳ್ಳಿ ಗವಿಮಠದ ದೇವಾಲಯದ ಕಲ್ಯಾಣ ಮಂಟಪ ಕಾಮಗಾರಿ ಕೂಡ ನಡೆಯುತ್ತಿದೆ. ಕಾಮಗಾರಿಯನ್ನು ವೀಕ್ಷಿಸಲು ಅವರು ಇಂದು ಊರಿಗೆ ಭೇಟಿ ನೀಡಿದ್ದರು. ದೇವಸ್ಥಾನ ನಿರ್ಮಾಣದ ಉಸ್ತುವಾರಿ ವಹಿಸಿಕೊಂಡಿರುವರೊಬ್ಬರು ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ, ಇನ್ನೂ ಏನೆಲ್ಲ ಅಗಬೇಕಿದೆ ಅನ್ನೋದನ್ನು ವಿವರಿಸಿದರು.

**ವರದಿ :ಎಸ್ ರವಿ ಹೊನ್ನೇನಹಳ್ಳಿ**

# ಸೂಫಿಸಂ ಮತ್ತು ದರ್ಗಾಗಳು: ಭಾರತದ ಸಿಂಕ್ರೆಟಿಕ್ ಪರಂಪರೆಯ ಸಂಕೇತ

ಇಸ್ಲಾಂ ಧರ್ಮದೊಳಗಿನ ಅತೀಂದ್ರಿಯ ಸಂಪ್ರದಾಯವಾದ ಸೂಫಿಸಂ, ಭಾರತದಲ್ಲಿ ಕೋಮುಸಾಮರಸ್ಯವನ್ನು ಬೆಳೆಸುವಲ್ಲಿ ಮತ್ತು ಸಿಂಕ್ರೆಟಿಕ್ ಸಂಸ್ಕೃತಿಯನ್ನು ಉತ್ತೇಜಿಸುವಲ್ಲಿ ಐತಿಹಾಸಿಕವಾಗಿ ಪ್ರಮುಖ ಪಾತ್ರ ವಹಿಸಿದೆ. ಪ್ರೀತಿ, ಸಹಿಷ್ಣುತೆ ಮತ್ತು ಅಸ್ತಿತ್ವದ ಏಕತೆ–ಯ ತತ್ವಗಳಲ್ಲಿ ಬೇರೂರಿರುವ ಸೂಫಿಸಂ ಧಾರ್ಮಿಕ ಮತ್ತು ಸಾಂಸ್ಕೃತಿಕ ಗಡಿಗಳನ್ನು ಮೀರುತ್ತದೆ, ದೈವಿಕತೆಯೊಂದಿಗಿನ ವೈಯಕ್ತಿಕ ಸಂಪರ್ಕವನ್ನು ಒತ್ತಿಹೇಳುತ್ತದೆ. ಸೂಫಿಸಂನ ಏಕೀಕರಣ ಶಕ್ತಿಯ ಅತ್ಯಂತ ಪ್ರಸಿದ್ಧ ಉದಾಹರಣೆಗಳಲ್ಲಿ ಒಂದು ನಿಜಾಮುದ್ದೀನ್ ಔಲಿಯಾ ಅವರ ಪರಂಪರೆ ಮತ್ತು ನವದೆಹಲಿಯ ನಿಜಾಮುದ್ದೀನ್ ದರ್ಗಾದ ನಿರಂತರ ಮಹತ್ವದಲ್ಲಿದೆ.
14 ನೇ ಶತಮಾನದ ಚಿಶ್ತಿ ಪಂಥದ ಪ್ರಮುಖ ಸೂಫಿ ಸಂತ ನಿಜಾಮುದ್ದೀನ್ ಔಲಿಯಾ, ಸೂಫಿ ಬೋಧನೆಗಳ ಸಾರವನ್ನು ಸಾಕಾರಗೊಳಿಸಿದರು. ಅವರು ಸಾರ್ವತ್ರಿಕ ಸಹೋದರತ್ವ ಮತ್ತು ಸಹಾನುಭೂತಿಯ ಆದರ್ಶಗಳನ್ನು ಪ್ರತಿಪಾದಿಸಿದರು, ಎಲ್ಲಾ ಧರ್ಮಗಳು, ಜಾತಿಗಳು ಮತ್ತು ಸಾಮಾಜಿಕ ಸ್ಥಾನಮಾನದ ಜನರನ್ನು ತಮ್ಮ ಆಧ್ಯಾತ್ಮಿಕ ಬೋಧನೆಗಳಲ್ಲಿ ಭಾಗವಹಿಸಲು ಸ್ವಾಗತಿಸಿದರು. "ವಹ್ದತ್ ಅಲ್–ವುಜುದ್" (ಇರುವಿಕೆಯ ಏಕತೆ) ತತ್ವದ ಮೇಲೆ ತಮ್ಮ ಆಳವಾದ ಒತ್ತು ನೀಡುತ್ತದೆ.
ಈ ತತ್ವಶಾಸ್ತ್ರವು ವೈವಿಧ್ಯಮಯ ಸಮುದಾಯಗಳೊಂದಿಗೆ ಆಳವಾಗಿ ಪ್ರತಿಧ್ವನಿಸಿತು, ಧಾರ್ಮಿಕ ಸಾಂಪ್ರದಾಯಿಕತೆಯ ಅಡೆತಡೆಗಳನ್ನು ಮುರಿದು ಪರಸ್ಪರ ಗೌರವ ಮತ್ತು ತಿಳುವಳಿಕೆಯನ್ನು ಬೆಳೆಸಿತು. ಸಂತರ ಸಮಾಧಿಯಾದ ನಿಜಾಮುದ್ದೀನ್ ದರ್ಗಾ ಅವರ ನಿರಂತರ ಪರಂಪರೆಗೆ ಸಾಕ್ಷಿಯಾಗಿದೆ. ಇದು ಕೇವಲ ಧಾರ್ಮಿಕ ದೇವಾಲಯವಲ್ಲ, ಆದರೆ ಧಾರ್ಮಿಕ ಸಂಬಂಧಗಳನ್ನು ಲೆಕ್ಕಿಸದೆ ಎಲ್ಲಾ ಹಂತಗಳ ಭಕ್ತರು ಮತ್ತು ಸಂದರ್ಶಕರನ್ನು ಆಕರ್ಷಿಸುವ ರೋಮಾಂಚಕ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕೇಂದ್ರವಾಗಿದೆ. ದರ್ಗಾವು ಭಾರತದ ಸಿಂಕ್ರೆಟಿಕ್ ಪರಂಪರೆಯ ಸಂಕೇತವಾಗಿದೆ, ಅಲ್ಲಿ ಮುಸ್ಲಿಮರು, ಹಿಂದೂಗಳು, ಸಿಖ್ಖರು ಮತ್ತು ಇತರರು ಆಶೀರ್ವಾದ ಪಡೆಯಲು, ಕವ್ವಾಲಿ ಪ್ರದರ್ಶನಗಳಲ್ಲಿ ಭಾಗವಹಿಸಲು ಮತ್ತು ಸಂತರ ವಾರ್ಷಿಕ ಉರುಸ್ ಆಚರಿಸಲು




ಒಟ್ಟುಗೂಡುತ್ತಾರೆ. ಸೂಫಿ ಸಂಪ್ರದಾಯದ ಕೇಂದ್ರಬಿಂದು ಸಂಗೀತ ಮತ್ತು ಕಾವ್ಯ, ಮತ್ತು ನಿಜಾಮುದ್ದೀನ್ ಔಲಿಯಾ ಅವರ ಶಿಷ್ಯ ಅಮೀರ್ ಖುಸ್ರೋ, ಈ ಕಲಾ ಪ್ರಕಾರಗಳನ್ನು ಭಾರತೀಯ ಸಂಸ್ಕೃತಿಗೆ ಸಂಯೋಜಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಖವ್ವಾಲಿ ಮತ್ತು ಇತರ ಶಾಸ್ತ್ರೀಯ ಪ್ರಕಾರಗಳ ಅಭಿವೃದ್ಧಿ ಸೇರಿದಂತೆ ಸಂಗೀತಕ್ಕೆ ಖುಸ್ರೋ ಅವರ ಕೊಡುಗೆಗಳು ಸಮುದಾಯಗಳ ನಡುವಿನ ಸಾಂಸ್ಕೃತಿಕ ಅಂತರವನ್ನು ಕಡಿಮೆ ಮಾಡಿತು. ಸ್ಥಳೀಯ ಭಾಷೆಗಳು ಮತ್ತು ಸಂಗೀತ ಶೈಲಿಗಳ ಅವರ ಬಳಕೆಯು ಸೂಫಿ ಬೋಧನೆಗಳನ್ನು ವಿಶಾಲ ಪ್ರೇಕ್ಷಕರಿಗೆ ಪ್ರವೇಶಿಸುವಂತೆ ಮಾಡಿತು, ಧಾರ್ಮಿಕ ವಿಭಾಗಗಳನ್ನು ಮೀರಿದ ಹಂಚಿಕೆಯ ಸಾಂಸ್ಕೃತಿಕ ಗುರುತನ್ನು ಬೆಳೆಸಿತು. ಕೋಮು ಸಾಮರಸ್ಯವನ್ನು ಉತ್ತೇಜಿಸುವಲ್ಲಿ ದರ್ಗಾದ ಪಾತ್ರವು ಅದರ ಆಧ್ಯಾತ್ಮಿಕ ಆಚರಣೆಗಳನ್ನು ಮೀರಿ ವಿಸ್ತರಿಸುತ್ತದೆ. ಇದು ಐತಿಹಾಸಿಕವಾಗಿ ವೈವಿಧ್ಯಮಯ ಸಮುದಾಯಗಳ ನಡುವೆ ಸಂವಾದ ಮತ್ತು ಸಂವಹನಕ್ಕೆ ಒಂದು ಸ್ಥಳವನ್ನು ಒದಗಿಸಿದೆ, ಹಂಚಿಕೆಯ ಸಂಬಂಧದ ಭಾವನೆಯನ್ನು ಸೃಷ್ಟಿಸುತ್ತದೆ. ಲಂಗರ್ (ಸಮುದಾಯ ಊಟ) ವಿತರಣೆಯಂತಹ ದೇವಾಲಯದೊಂದಿಗೆ ಸಂಬಂಧಿಸಿದ ಆಚರಣೆಗಳು ಮತ್ತು ಆಚರಣೆಗಳು ಸಮಾನತೆ ಮತ್ತು ಮಾನವೀಯತೆಗೆ ಸೇವೆಯ ಸೂಫಿ ತತ್ವಗಳನ್ನು ಸಾಕಾರಗೊಳಿಸುತ್ತವೆ. ಈ ಅಭ್ಯಾಸಗಳು ಹಿಂದುಳಿದವರ ದೈಹಿಕ ಅಗತ್ಯಗಳನ್ನು ಮಾತ್ರ ಪರಿಹರಿಸುವುದಿಲ್ಲ ಆದರೆ ಏಕತೆ ಮತ್ತು ಸಹಾನುಭೂತಿಯ ಸಂದೇಶವನ್ನು ಬಲಪಡಿಸುತ್ತವೆ.
ಕೋಮು ಸಾಮರಸ್ಯಕ್ಕೆ ಅದರ ಗಮನಾರ್ಹ ಕೊಡುಗೆಗಳ ಹೊರತಾಗಿಯೂ, ದರ್ಗಾಗಳ ಪರಂಪರೆಯು ಕೆಲವು ಪ್ರೇರಿತ ವ್ಯಕ್ತಿಗಳ ದ್ವೇಷ ಪ್ರಚೋದಕ ತಂತ್ರಗಳಿಂದಾಗಿ ಸವಾಲುಗಳನ್ನು ಎದುರಿಸುತ್ತದೆ. ದ್ವೇಷ ಪ್ರಚೋದಕರು ಮತ್ತು ಅವರ ವಿಭಜನಕಾರಿ ನಿರೂಪಣೆಗಳು ಸೂಫಿ ದೇವಾಲಯಗಳ ಸಮನ್ವಯ ಸಂಪ್ರದಾಯವನ್ನು ಹಾಳುಮಾಡುವ ಪ್ರಯತ್ನಗಳಿಗೆ ಕಾರಣವಾಗಿವೆ. ಇಂತಹ ಕ್ರಮಗಳು ಸೂಫಿ ಸಂತರ ಪರಂಪರೆಯನ್ನು ಹಾಳುಮಾಡುವುದಲ್ಲದೆ, ವೈವಿಧ್ಯತೆ ಮತ್ತು ಸಹಬಾಳ್ವೆಯಲ್ಲಿ ಅಭಿವೃದ್ಧಿ ಹೊಂದಿದ ಭಾರತದ ಸಾಂಸ್ಕೃತಿಕ ರಚನೆಯನ್ನು ಸವೆಸುವ ಅಪಾಯವನ್ನುಂಟುಮಾಡುತ್ತವೆ. ಈ ವಿಭಜನಕಾರಿ ಶಕ್ತಿಗಳನ್ನು ಎದುರಿಸಲು ಸೂಫಿಸಂನ ಬೋಧನೆಗಳಿಗೆ ಮತ್ತು ಭಾರತದ ಪರಂಪರೆಗೆ ಅದರ ಕೊಡುಗೆಗಳ ಆಚರಣೆಗೆ ನವೀಕೃತ ಒತ್ತು ನೀಡುವ ಅಗತ್ಯವಿದೆ. ಸೂಫಿಸಂನ ಶ್ರೀಮಂತ ಇತಿಹಾಸಕ್ಕೆ ಮೀಸಲಾಗಿರುವ ವಿಚಾರ ಸಂಕಿರಣಗಳು, ಸಮ್ಮೇಳನಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಅದರ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ಮತ್ತು ಉತ್ತೇಜಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ನಿಜಾಮುದ್ದೀನ್ ಔಲಿಯಾ ಅವರಂತಹ ಸಂತರ ಜೀವನ ಮತ್ತು ಬೋಧನೆಗಳನ್ನು ಎತ್ತಿ ತೋರಿಸುವ ಶೈಕ್ಷಣಿಕ ಉಪಕ್ರಮಗಳು ಕೋಮು ಸಾಮರಸ್ಯದ ಮಹತ್ವದ ಬಗ್ಗೆ ಆಳವಾದ ತಿಳುವಳಿಕೆಯನ್ನು ಬೆಳೆಸಬಹುದು. ನಿಜಾಮುದ್ದೀನ್ ಔಲಿಯಾ ಅವರ ಉದಾಹರಣೆ ಮತ್ತು ನಿಜಾಮುದ್ದೀನ್ ದರ್ಗಾದ ಶಾಶ್ವತ ಮಹತ್ವವು ವೈವಿಧ್ಯಮಯ ಸಮುದಾಯಗಳನ್ನು ಒಗ್ಗೂಡಿಸುವಲ್ಲಿ ಸೂಫಿಸಂನ ಪರಿವರ್ತಕ ಶಕ್ತಿಯನ್ನು ಒತ್ತಿಹೇಳುತ್ತದೆ. ಪ್ರೀತಿ, ಸಹಿಷ್ಣುತೆ ಮತ್ತು ಎಲ್ಲಾ ಜೀವಿಗಳ ಏಕತೆಯನ್ನು ಒತ್ತಿಹೇಳುವ ಮೂಲಕ, ಸೂಫಿಸಂ ವಿಭಜನೆ ಮತ್ತು ಅಪಶ್ರುತಿಯ ಸಮಕಾಲೀನ ಸವಾಲುಗಳನ್ನು ಎದುರಿಸಲು ಒಂದು ನೀಲನಕ್ಷೆಯನ್ನು ನೀಡುತ್ತದೆ. ಸೂಫಿಸಂನ ಚೈತನ್ಯವು ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುವುದನ್ನು ಖಚಿತಪಡಿಸಿಕೊಳ್ಳಲು, ಒಳಗೊಳ್ಳುವಿಕೆ ಮತ್ತು ಪರಸ್ಪರ ಗೌರವವನ್ನು ಗೌರವಿಸುವ ಸಮಾಜವನ್ನು ಬೆಳೆಸಲು ಈ ಪರಂಪರೆಯನ್ನು ಆಚರಿಸುವುದು ಮತ್ತು ಸಂರಕ್ಷಿಸುವುದು ಅತ್ಯಗತ್ಯ.

**–ಮೊಹಮ್ಮದ್ ಸಲೀಮ್,**
**ಪಿಎಚ್ಡಿ, ಜಾಮಿಯಾ ಮಿಲಿಯಾ ಇಸ್ಲಾಮಿಯಾ**

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State